Swabhimani Sahakari
Pages : 40 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ರಜತ ಮಹೋತ್ಸವ 2025

Volume - 22
Issue - 04
April- 2025



ಧ್ಯೇಯ:
ನಮ್ಮ ಶಕ್ತಿ, ನಮ್ಮ ಗ್ರಹ

ಸುಸ್ಥಿರ ಭವಿಷ್ಯಕ್ಕಾಗಿ ನವೀಕರಿಸಬಹುದಾದ ಶಕ್ತಿ ಮತ್ತು ಸಾಮೂಹಿಕ ಪ್ರಯತ್ನಕ್ಕೆ ಒತ್ತು

ಏಪ್ರಿಲ್ 22
**ಅಂತರರಾಷ್ಟ್ರೀಯ ಮಾತೃ ಭೂಮಿಯ ದಿನ**

ಏಪ್ರಿಲ್ 06
**ಶ್ರೀರಾಮ ನವಮಿ**



ಏಪ್ರಿಲ್ 10
**ಮಹಾವೀರ ಜಯಂತಿ**



ಏಪ್ರಿಲ್ 14
**ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ**



ಏಪ್ರಿಲ್ 18
**ಗುಡ್ ಫ್ರೈಡೇ**



ಏಪ್ರಿಲ್ 30
**ಬಸವ ಜಯಂತಿ**



ಸೌಹಾರ್ದ ಸಹಕಾರಿಗಳ ಸಂಖ್ಯೆ: 6474

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ:1704

# ಶಿಕ್ಷಣ ಮತ್ತು ತರಬೇತಿಯಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟದಲ್ಲಿ ವೃದ್ಧಿ ಸಾಧ್ಯ.



ಜಿ. ನಂಜನಗೌಡ

ಈ ತಿಂಗಳಲ್ಲಿ ಜರುಗುವ ಶ್ರೀ ರಾಮನವಮಿ, ಮಹಾವೀರ ಜಯಂತಿ, ಅಂಬೇಡ್ಕರ್ ಜಯಂತಿ, ಹಾಗೂ ಬಸವ ಜಯಂತಿಯ ಹಾರ್ದಿಕ ಶುಭಾಶಯಗಳು. ಈ ಎಲ್ಲಾ ಮಹಾನಿಯರುಗಳುನ್ನು ಸ್ಮರಿಸಿ ಅವರ ದಾರಿಯಲ್ಲಿ ಸಾಗೋಣ.

**ಆತ್ಮೀಯರೇ,**

ಈ ತಿಂಗಳಲ್ಲಿ ಜರುಗುವ ಶ್ರೀ ರಾಮನವಮಿ, ಮಹಾವೀರ ಜಯಂತಿ, ಅಂಬೇಡ್ಕರ್ ಜಯಂತಿ, ಹಾಗೂ ಬಸವ ಜಯಂತಿಯ ಹಾರ್ದಿಕ ಶುಭಾಶಯಗಳು. ಈ ಎಲ್ಲಾ ಮಹಾನಿಯರುಗಳುನ್ನು ಸ್ಮರಿಸಿ ಅವರ ದಾರಿಯಲ್ಲಿ ಸಾಗೋಣ.

ಯಾವುದೇ ಸಂಸ್ಥೆಯ ಉತ್ತಮ ಆಡಳಿತ ವ್ಯವಸ್ಥೆಯು ಅದರ ಪಾರದರ್ಶಕ ಹಾಗೂ ವೃತ್ತಿಪರತೆಯ ಮೇಲೆ ಅವಲಂಬಿತವಾಗಿರುತ್ತದೆ ಎಂದರೆ ತಪ್ಪಾಗಲಾರದು. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಶಿಕ್ಷಣ ಹಾಗೂ ತರಬೇತಿಯನ್ನು ನೀಡಲಾಗುತ್ತಿರುವ ವಿಷಯಗಳು ತಾವುಗಳು ಗಮನಿಸಿರಬಹುದು. ರಾಜ್ಯದ ಸಹಕಾರಿ ವಲಯದಲ್ಲಿ ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ನಿರ್ವಹಣೆಯ ಬಗ್ಗೆ ಶ್ಲಾಘನೆ ಹಾಗೂ ಪ್ರಶಂಸೆಗಳು ವ್ಯಕ್ತವಾಗುತ್ತಿವೆ. ಇದು ಸಂಯುಕ್ತ ಸಹಕಾರಿಗೆ ಹೆಮ್ಮೆಯ ವಿಷಯ.

ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳು ನಿಂತ ನೀರಾಗಬಾರದು. ಸ್ವಚ್ಛ ಹಾಗೂ ಶುದ್ಧ ನೀರಿನಂತಿರಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಸಂಯುಕ್ತ ಸಹಕಾರಿಯು ತನ್ನ ಸದಸ್ಯ ಸಹಕಾರಿಗಳ ಹಿತದೃಷ್ಟಿಯಿಂದ ಹಲವಾರು ತರಬೇತಿ ಕಾರ್ಯಕ್ರಮಗಳುನ್ನು ಹಮ್ಮಿಕೊಳ್ಳುತ್ತಿರುವ ಪ್ರಕ್ರಿಯೆಯು ನಿರಂತರವಾಗಿದೆ. ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳಿಗಾಗಿ ಹಾಗೂ ಸೌಹಾರ್ದ ಸಹಕಾರಿಗಳಿಗಾಗಿ ಪ್ರತ್ಯೇಕ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ವಿಶೇಷವಾಗಿ ಯುವಕರನ್ನು ಈ ಕ್ಷೇತ್ರಕ್ಕೆ ಬರಮಾಡಿಕೊಳ್ಳುವ ಉದ್ದೇಶದಿಂದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ 4 ತಂಡಗಳಲ್ಲಿ ಡಿ.ಸಿ.ಬಿ.ಎಮ್. ಕೋರ್ಸನ್ನು ಪ್ರಾರಂಭಿಸಲಾಗಿದೆ. ಗ್ರಾಮೀಣ ಹಾಗೂ ಪಂಚಾಯತ್‌ರಾಜ್ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಈಗಾಗಲೇ 2 ತಂಡಗಳನ್ನು ಯಶಸ್ವಿಯಾಗಿ ನಿರ್ವಹಿಸಿ, 3ನೇ ತಂಡವನ್ನು ಪ್ರಾರಂಭಿಸಲಾಗಿದೆ. ಈ ರೀತಿಯಾಗಿ ಸಹಕಾರ ಶಿಕ್ಷಣ ಮತ್ತು ತರಬೇತಿ ನೀಡುವಲ್ಲಿ ಸಂಯುಕ್ತ ಸಹಕಾರಿ ನಿರಂತರವಾಗಿ ಆಲೋಚನೆ ಮಾಡುತ್ತಾ ಬಂದಿದೆ, ಅದರ ಪರಿಣಾಮವಾಗಿ ಸಹಕಾರ ಶಿಕ್ಷಣ ಹಾಗೂ ತರಬೇತಿ ಪಡೆದ ಸಹಕಾರಿಗಳು ತಮ್ಮ ಸಂಸ್ಥೆಗಳನ್ನು ಉತ್ತಮವಾಗಿ ನಡೆಸುತ್ತಿರುವುದು ಅಧ್ಯಯನದಿಂದ ತಿಳಿಯಬಹುದಾಗಿದೆ.

ಸಂಯುಕ್ತ ಸಹಕಾರಿಯ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳ ಬಗ್ಗೆ ರಾಜ್ಯದ ಎಲ್ಲಾ ಸಹಕಾರಿ ಸಂಸ್ಥೆಗಳು ಸಕ್ರೀಯವಾಗಿ ಭಾಗವಹಿಸುವುದರ ಜೊತೆಗೆ ತಮ್ಮ ತಮ್ಮ ಸಂಸ್ಥೆಗಳಲ್ಲಿ ಸದಸ್ಯರಿಗೆ ಶಿಕ್ಷಣ, ಸಿಬ್ಬಂದಿಯವರಿಗೆ ತರಬೇತಿ ಹಾಗೂ ಸಾರ್ವಜನಿಕರ ಜೊತೆಗೆ ಉತ್ತಮ ಸಂಪರ್ಕವನ್ನು ಹೊಂದುವುದಕ್ಕಾಗಿ ಹಲವಾರು ವಿಧವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲುದಾರರಾಗಲು ಕೋರಿದೆ.

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ.......................................... 2
ಸಂಪಾದಕೀಯ.......................................... 3
ಜ್ಞಾನ ಜ್ಯೋತಿ.......................................... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......................................... 05–15
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......................................... 16–20
**ಲೇಖನಗಳು :**
Liberalisation of Co-operative Law – Karnataka Model .................... 21–24
Recent RBI circulars and its impact on the Financial Statements of UCBs and important prudential norms applicable to UCBs: .............................. 25–34

# ಸಂಪಾದಕೀಯ

## ಸಹಕಾರಿ ವಿಶ್ವವಿದ್ಯಾಲಯ ಪ್ರಾರಂಭಿಸುವುದಕ್ಕೆ ಲೋಕಸಭೆ ಅನುಮತಿ : ಸ್ವಾಗತಾರ್ಹ

ದೇಶದ ಸಹಕಾರ ಕ್ಷೇತ್ರಕ್ಕೆ ಈಗ ಅಭಿವೃದ್ಧಿಯ ಪರ್ವಕಾಲ ಬಂದಂತೆ ಭಾಸವಾಗುತ್ತಿದೆ. 2021 ರಲ್ಲಿ "ಸಹಕಾರ ಸೇ ಸಮೃದ್ಧಿ" ಎಂಬ ಅಭಿವೃದ್ಧಿ ಮಂತ್ರದೊಂದಿಗೆ ಪ್ರಾರಂಭವಾಗಿರುವ ಕೇಂದ್ರದ ಸಹಕಾರ ಸಚಿವಾಲಯ ಸಹಕಾರಿಗಳಲ್ಲಿ ಹೊಸ ಚೈತನ್ಯವನ್ನು ಮೂಡಿಸಿದೆ. ಸಹಕಾರ ಕ್ಷೇತ್ರ ಈ ದೇಶದ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರವನ್ನು ನಿರ್ವಹಿಸಬಲ್ಲ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಹಣಕಾಸಿನ ನಿರ್ವಹಣೆಯ ಪ್ರಮುಖ ಸಂಸ್ಥೆಗಳ ಮುಖ್ಯ ವಾಹಿನಿಯಲ್ಲಿ ಬರಲು ಅಗತ್ಯ ಪ್ರಯತ್ನವನ್ನು ಮಾಡುತ್ತಿರುವುದು ಸಂತೋಷದ ವಿಷಯ.

ಪ್ರಸ್ತುತ ಸಹಕಾರ ಸಚಿವಾಲಯ ಇದುವರೆಗೆ ತೆಗೆದುಕೊಂಡಿರುವ 54 ಅಭಿವೃದ್ಧಿ ಯೋಜನೆಗಳ ವಿಷಯಗಳಲ್ಲಿ ಅತ್ಯಂತ ಮಹತ್ವದ್ದು ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆಗೆ ತೆಗೆದುಕೊಂಡಿರುವ ಕ್ರಮ. ಲೋಕಸಭೆಯಲ್ಲಿ 26/3/2025 ರಂದು ತ್ರಿಭುವನ ಸಹಕಾರಿ ವಿಶ್ವವಿದ್ಯಾಲಯ ಮಸೂದೆಯನ್ನು ಅಂಗೀಕರಿಸಲಾಗಿದೆ. ಇದರಿಂದಾಗಿ ಗ್ರಾಮೀಣ ನಿರ್ವಹಣಾ ಸಂಸ್ಥೆ, (ಇರ್ಮಾ) ಅನ್ನು ಭಾರತದ ಮೊದಲ ಸಹಕಾರಿ ವಿಶ್ವವಿದ್ಯಾಲಯವಾಗಿ ಪರಿವರ್ತಿಸಲಾಗಿದೆ. ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಮಂಡಿಸಿದ ಈ ಮಸೂದೆಯನ್ನು ಧ್ವನಿ ಮತದ ಮೂಲಕ ಅಂಗೀಕರಿಸಿ ಸಹಕಾರಿ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಲಾಗಿದೆ.

ಮಸೂದೆ ಅಂಗೀಕಾರ ಘೋಷಿಸಿದ ನಂತರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಇದು ಭಾರತದ ಸಹಕಾರಿ ಕ್ಷೇತ್ರಕ್ಕೆ ಪ್ರಮುಖ ಸಾಧನೆ ಎಂದು ಅಭಿಪ್ರಾಯಪಟ್ಟರು. ಸಹಕಾರ ಸಚಿವ ಶ್ರೀ ಅಮಿತ್ ಶಾ ವಿಶ್ವವಿದ್ಯಾಲಯದ ಲಾಭಗಳನ್ನು ವಿವರಿಸುತ್ತ ಪ್ರತಿ ವರ್ಷ 8 ಲಕ್ಷ ಸಹಕಾರಿ ವೃತ್ತಿಪರರನ್ನು ತರಬೇತಿ ನೀಡುವ ಮಹತ್ವಾಕಾಂಕ್ಷೆಯ ಗುರಿ ಇದೆ ಎಂದು ತಿಳಿಸಿದ್ದಾರೆ. ಈ ಮಸೂದೆ ಭಾರತದ ಸಹಕಾರಿ ಇತಿಹಾಸದಲ್ಲಿ ಮೈಲಿಗಲ್ಲು ಸಹಕಾರಿಗಳನ್ನು ಜಾಗತಿಕ ಮಟ್ಟದ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿಯ ಮೂಲಕ ಕಾರ್ಪೊರೇಟ್‌ಗಳ ಜೊತೆ ಸ್ಪರ್ಧಿಸುವಂತೆ ಮಾಡುವುದು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸುವುದು, ಸ್ವ–ಉದ್ಯೋಗವನ್ನು ಉತ್ತೇಜಿಸಲು ಮತ್ತು ಸಣ್ಣ ಉದ್ಯಮಗಳನ್ನು ಬೆಂಬಲಿಸಲು ಇದು ಪ್ರಮುಖ ಪಾತ್ರ ವಹಿಸಲಿದೆ. ಈ ವಿಶ್ವವಿದ್ಯಾಲಯಕ್ಕೆ ಭಾರತದ ಸಹಕಾರಿ ಚಳವಳಿಯ ಪಿತಾಮಹರಾಗಿ ಗುರುತಿಸಲಾದ ತ್ರಿಭುವನದಾಸ್ ಕಿಶಿಭಾಯಿ ಪಟೇಲ್ ಅವರ ಹೆಸರನ್ನು ಇಡಲಾಗಿದೆ. ಅವರು ಅಮೂಲ್‌ನ ಸ್ಥಾಪನೆಯ ಪ್ರಮುಖ ನಾಯಕರಾಗಿಯೂ ಕಾರ್ಯನಿರ್ವಹಿಸಿದ್ದರು. "ಈ ವಿಶ್ವವಿದ್ಯಾಲಯವು ಸಹಕಾರಿಗಳಿಗೆ ವಿಶೇಷ ಜ್ಞಾನವನ್ನು ನೀಡುವ ಮೂಲಕ ಅವರನ್ನು ಶಕ್ತಿಪಡಿಸುತ್ತದೆ," ಎಂದು ಅಮಿತ್ ಶಾ ಹೇಳಿದರು. ಸಹಕಾರಿ ನಿರ್ವಹಣೆ, ಆಡಳಿತ ಮತ್ತು ಹೊಸತನ್ನು ಆವಿಷ್ಕಾರಗೊಳಿಸುವ ತಂತ್ರಗಳ ಮೇಲೆ ಕೇಂದ್ರೀಕರಿಸಿದ ಈ ವಿಶ್ವವಿದ್ಯಾಲಯವು ಸಹಕಾರಿ ಕ್ಷೇತ್ರದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲಿದೆ. ಸಮಾನ ಅವಕಾಶಗಳನ್ನು ಒದಗಿಸಲು, ಕೇಂದ್ರ ಸರ್ಕಾರದ ಮೀಸಲು ನೀತಿಗಳನ್ನು ಅನುಸರಿಸಿ, ಒಳಗೊಳ್ಳುವ ಪ್ರವೇಶ ಮತ್ತು ಉದ್ಯೋಗ ನೀತಿಗಳನ್ನು ಅನುಸರಿಸಲಿದೆ. ಉನ್ನತ ಶಿಕ್ಷಣದ ಮಾನದಂಡಗಳನ್ನು ಕಾಪಾಡಲು ಮತ್ತು ಜವಾಬ್ದಾರಿಯನ್ನು ಖಚಿತಪಡಿಸಿಕೊಳ್ಳಲು, ಕೇಂದ್ರ ಸರ್ಕಾರವು ವಿಶ್ವವಿದ್ಯಾಲಯದ ಕಾರ್ಯಾಚರಣೆಯನ್ನು ಮೇಲ್ವಿಚಾರಣೆ ಮಾಡಲಿದೆ, ಕುಲಪತಿಯನ್ನು ನೇಮಿಸಲಿದೆ ಮತ್ತು ಆಡಳಿತ ನಿಯಮಾವಳಿಗಳನ್ನು ರಚಿಸಿ ನಿಯಂತ್ರಿಸಲಿದೆ.

ಸಹಕಾರಿಗಳ ಅನೇಕ ದಿನಗಳ ಬೇಡಿಕೆಯನ್ನು ಶ್ರೀ ಅಮಿತ್ ಶಾ ರವರು ನೆರವೇರಿಸಿದ್ದಾರೆ. ಸಹಕಾರಿಗಳು ಮುಂದಿನ ದಿನಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ವೃತ್ತಿಪರರನ್ನು ತಮ್ಮ ಸಹಕಾರಿ ಸಂಸ್ಥೆಗಳಿಗೆ ಉತ್ತಮ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದರ ಮೂಲಕ ಸಹಕಾರ ಸಂಸ್ಥೆಗಳ ಸಿಬ್ಬಂದಿಗಳ ಉತ್ತಮ ಸಹಕಾರಿ ಶಿಕ್ಷಣ ಪಡೆದ ತರಬೇತಿ ಪಡೆದ ಸಿಬ್ಬಂದಿಯವರ ಕೊರತೆ ಆಗಲಾರದು. ಸಹಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲ ಸಾರ್ವಜನಿಕರಿಗೆ ಈ ಬಗ್ಗೆ ಅರಿವು ಮೂಡಿಸುವುದರ ಜೊತೆಗೆ ವಿಶ್ವ ವಿದ್ಯಾಲಯದ ಸಹಕಾರ ಶಿಕ್ಷಣ ಹಾಗೂ ತರಬೇತಿ ವಿಷಯಗಳ ಸದುಪಯೋಗ ಮಾಡಿಕೊಳ್ಳಬೇಕಾದುದು ಅಗತ್ಯ ಎಂದು ಭಾವಿಸಬಹುದಾಗಿದೆ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಮಿತರಾಗ"

ಪರಮಾರ್ಥವನ್ನು ಸಾಧಿಸುವ ಸಾಧನೆಗಳನ್ನು ಕುರಿತು ಶಿಷ್ಯ ಪ್ರಶ್ನೆ ಕೇಳುತ್ತಿದ್ದಾನೆ. ಗುರು ಉತ್ತರಿಸುತ್ತಿದ್ದಾನೆ. ಪರಮಾರ್ಥ ಈ ಶಬ್ದವನ್ನು ನಾವೆಲ್ಲ ಬಹಳ ಬಳಸುತ್ತೇವೆ. ಅದರ ಸರಿಯಾದ ಅರ್ಥವನ್ನು ತಿಳಿಯುವ ಬಯಕೆ ಶಿಷ್ಯನಿಗೆ. ಇತಿಹಾಸದ ಪುಟಗಳನ್ನು ನೋಡಿದಾಗ ಅಲ್ಲಿ ಈ ಪರಮಾರ್ಥವನ್ನು ಸಾಧಿಸುವ ಸಾಹಸ ಮಾಡಿದವರು ಬಹಳ ಜನ ಸಿಗುತ್ತಾರೆ. ಅವರು ಅದನ್ನು ಅರಿತವರು, ಅನುಭವಿಸಿದವರು. ಅವರ ಜೀವನವನ್ನು ನೋಡಿದಾಗ ಪರಮಾರ್ಥ ಏಕೆ? ಹೇಗೆ? ಅದರ ಪರಿಣಾಮಗಳೇನು? ಎಂಬುದು ತಿಳಿಯುತ್ತದೆ. ಧನ–ಧಾನ್ಯಗಳಿಕೆಗೆ ನಾವು ಕೊಡುವಷ್ಟೇ ಮಹತ್ವವನ್ನು ಅವರು ಪರಮಾರ್ಥದ ಗಳಿಕೆಗೆ ಕೊಟ್ಟರು. ಹಗಲಿರುಳೆನ್ನದೆ, ಹಸಿವು ನೀರಡಿಕೆಗಳೆನ್ನದೆ ಲೌಕಿಕ ಸಂಪತ್ತಿಗೆ ಸಾಮಾನ್ಯರು ಕಷ್ಟಪಡುತ್ತಾರೆ. ಇದೇ ರೀತಿಯ ಕಷ್ಟವನ್ನು ಸಂತರು ಪರಮಾರ್ಥ ಹೊಂದಲು ಅನುಭವಿಸಿದರು. ಆ ಸಂತರಲ್ಲಿ ಕೆಲವರು ಎಲ್ಲ ರೀತಿಯ ಲೌಕಿಕ ಸಂಪತ್ತನ್ನು ಹೊಂದಿದವರಿದ್ದರು. ಆದರೆ ಪರಮಾರ್ಥದ ರುಚಿ ಹತ್ತಿದಾಗ ಅವರು ಆ ಸಂಪತ್ತನ್ನೆಲ್ಲ ತ್ಯಜಿಸಿದರು. ಅವರು ಜೀವನವನ್ನು ಸಂತಸದಿಂದ ಕಳೆದರು. ಇದರಿಂದ ಸಂತಸದಿಂದಿರಲು ಪರಮಾರ್ಥ ಬೇಕು ಎಂಬುದು ತಿಳಿಯುತ್ತದೆ.

ಆತ್ಮ ಸಂಪತ್ತು ಇದು ಎಲ್ಲ ಕಡೆ ಇದೆ. ಅದನ್ನು ಅನುಭವಿಸಬೇಕಷ್ಟೇ ಒಂದು ಬೆಲೆಬಾಳುವ ಪಲ್ಲಂಗ ಅದರ ಮೇಲೆ ಮೆತ್ತನೆಗದೆ. ಬೆಚ್ಚಗಿನ ಹೊದಿಕೆ, ಸಂಗೀತ ಮೆಲ್ಲಗೆ ಕೇಳುತ್ತಿರುತ್ತದೆ. ಅಲ್ಲೊಬ್ಬ ಮಲಗಿದ್ದಾನೆ. ಕಣ್ಣುಮುಚ್ಚಿವೆ. ಆದರೆ ಮನಸ್ಸು ಎಚ್ಚರವಿದೆ. ನಿದ್ರೆಗೆ ಲಕ್ಷ ಲಕ್ಷ ಖರ್ಚು ಮಾಡಿದ್ದಾನೆ. ಆದರೂ ನಿದ್ರೆಯ ದಾರಿಕಾಯುತ್ತಿದ್ದಾನೆ. ಇವನ ಸೇವಕ ಮನೆಯ ಹಿಂದಿರುವ ಹಿತ್ತಲಿನ ಕಲ್ಲಿನ ಮೇಲೆ ಹಾಸಿಗೆ–ಹೊದಿಕೆ ಇಲ್ಲದೆ ಮಲಗಿದ್ದಾನೆ. ಗಾಢನಿದ್ರೆ ಹತ್ತಿದೆ. ಮಾಲೀಕ ಅವನನ್ನು ಕಿಟಕಿ ಮೂಲಕ ನೋಡಿದ ಹೊರಗೆ ಬಂದು ಅವನನ್ನು ಎಬ್ಬಿಸಿ. "ನಿನ್ನ ಹಾಗೆ ನಿದ್ರೆ ಹತ್ತಲು ಏನು ಮಾಡಬೇಕು?" ಎಂದು ಕೇಳಿದ. ಆಗ ಸೇವಕ. "ಏನೂ ಮಾಡಬೇಡಿ ಎಂದನು. ಎಲ್ಲಾ ಇದ್ದರೇನು ನಾಲ್ಕು ಕ್ಷಣ ನಿಶ್ಚಿಂತ ನಿದ್ರೆ ಇರಬೇಕು. ಅದಕ್ಕಾಗಿ ಮನಸ್ಸು ಖಾಲಿ ಇರಬೇಕು. ಮೈ ದಣಿಯಬೇಕು. ಆಗ ಸೌಖ್ಯ ಉಂಟಾಗುತ್ತದೆ.

ಬದುಕಿನಲ್ಲಿ ಪಾರಮಾರ್ಥಿಕ ನಿದ್ರೆ ಬರುತ್ತದೆ. ಅದು ಬಹಳ ಮಹತ್ವದ್ದು. ಆ ಪಾರಮಾರ್ಥಿಕ ನಿದ್ರೆ ಎಚ್ಚರವಿರುವಾಗ ಬರುವ ನಿದ್ರೆ. ಈ ನಿದ್ರೆ ಬಂದ ಬಳಿಕ ಭೇದಭಾವ ಉಳಿಯುವುದಿಲ್ಲ. ಪರಮ ಶಾಂತಿ ಉಂಟಾಗುತ್ತದೆ. ಇದನ್ನು ಪಡೆಯುವುದು ಜೀವನದಲ್ಲಿ ಬಹಳ ಮಹತ್ವದ್ದು ಇದಕ್ಕಾಗಿ ಜನ ಮೂರು ಕೆಲಸಗಳನ್ನು ಮಾಡಿದರು. ಮಿತರಾಗ. ಬಾಹ್ಯ ಶುಚಿತ್ವ ಹಾಗೂ ಸ್ವಾಧ್ಯಾಯ. ಬಹಳ ಹಚ್ಚಿಕೊಳ್ಳಲಾರದಂತೆ ಇರುವುದೇ 'ಮಿತರಾಗ' ತಲೆಯಲ್ಲಿ ನಾವೆಷ್ಟು ಹಾಕಿಕೊಳ್ಳುತ್ತೇವೆಂದರೆ ಒಂದು ರೀತಿಯ ಒತ್ತಡದಲ್ಲಿ ಸಿಕ್ಕಿಹಾಕಿಕೊಳ್ಳುತ್ತೇವೆ. ಮನಷ್ಯ ಎಲ್ಲವನ್ನು ಮಾಡಬೇಕು. ಆದರೆ ಬಹಳ ಹಚ್ಚಿಕೊಳ್ಳಬಾರದು. ಸಹಜವಾಗಿ ಬಾಳಬೇಕು.

ಪರಮಾರ್ಥದ ಸೌಖ್ಯ ಉಂಟಾಗಬೇಕಾದರೆ ಬಹಳಷ್ಟು ಹಚ್ಚಿಕೊಳ್ಳಬಾರದು. ಮನೆಯಲ್ಲಿದ್ದರೂ ಸೌಖ್ಯದಿಂದಿರಬೇಕು. ಇದರಿಂದ ಪರಮಾರ್ಥ ಉಂಟಾಗುತ್ತದೆ. ಮಾಡಬೇಕು. ಆದರೆ ಹಚ್ಚಿಕೊಳ್ಳಬಾರದು. ಮನೆಯಲ್ಲಿ ಎಷ್ಟು ಇದ್ದರೂ ತಲೆ ಖಾಲಿ ಇರಬೇಕು. ಇದನ್ನು 'ಮಿತರಾಗ' ಜೀವನ ಎನ್ನುವರು. 'ಮಿತರಾಗ' ಎಂದರೆ ಹೊರಗೆ ಕೆಲಸ ಮಾಡಬೇಕು. ಸಂಪತ್ತಿರಬೇಕು. ಪರಿಶ್ರಮವಿರಬೇಕು ಆದರೆ ಒಳಗೆ ಶೂನ್ಯವಾಗಿರಬೇಕು. ಈ ಜಗತ್ತನ್ನು ಬಿಡು ಎಂದು ಹೇಳುವುದಿಲ್ಲ. ಇದೆಲ್ಲ ಕೇವಲ ಭೌತಿಕ. ದಿವವಿಡಿ ದುಡಿಯಬೇಕು. ಸಂಪತ್ತು. ಬಂಧು–ಭಾಂಧವರಿಂದ ಮನೆ ತುಂಬಿರಬೇಕು. ಆದರೆ ತಲೆ ಖಾಲಿ ಇರಬೇಕು.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
|---|---|---|---|---|---|---|
| **ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್)** | | | | | | |
| 1 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 9459 | 1302 | 1841 | 1012 | 13614 |
| 2 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 6948 | 965 | 1185 | 603 | 9701 |
| 3 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 2511 | 337 | 656 | 409 | 3913 |
| **ಮಾರ್ಚ್ 2025ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 386 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 670** | | | | | | |
| **ಅಮಲ್ಜಾರಿ ವಿಭಾಗ** | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 6927 | 1207 | 2083 | 733 | 10950 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 986 | 210 | 489 | 152 | 1837 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 5921 | 942 | 1594 | 576 | 9113 |
| **ಮಾರ್ಚ್ 2025ರ ತಿಂಗಳಿನಲ್ಲಿ ಒಟ್ಟು 101 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# ಕಸ ರಹಿತ ಅಡುಗೆ ಮನೆಯ ಕಲ್ಪನೆಯೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಣೆ.



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಅರ್ಥಪೂರ್ಣವಾದ ಕಾರ್ಯಕ್ರಮವನ್ನು ಆಚರಿಸಿತು. ಅದಮ್ಯ ಚೇತನ ಫೌಂಡೇಶನ್‌ನ ವ್ಯವಸ್ಥಾಪಕ ಟ್ರಸ್ಟಿ ಮತ್ತು ಅಧ್ಯಕ್ಷೆ ಡಾ. ತೇಜಸ್ವಿನಿ ಅನಂತ್ ಕುಮಾರ್ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸುಸ್ಥಿರ ಜೀವನವನ್ನು ಒತ್ತಿ ಹೇಳುತ್ತಾ, ಒಂದು ದಶಕಕ್ಕೂ ಹೆಚ್ಚು ಕಾಲ ಕಸವಿಲ್ಲದ ಅಡುಗೆ ಮನೆಯನ್ನು ನಿರ್ವಹಿಸುವ, ಪರ್ಯಾಯ ಇಂಧನ ಮೂಲವಾಗಿ ತ್ಯಾಜ್ಯವನ್ನು ಬ್ರಿಕೆಟ್‌ಗಳಾಗಿ ಪರಿವರ್ತಿಸುವ ತಮ್ಮ ಪ್ರಯಾಣವನ್ನು ಅವರು ಹಂಚಿಕೊಂಡರು. ಬದಲಾವಣೆಯು ಮನೆಯಿಂದಲೇ ಪ್ರಾರಂಭವಾಗುತ್ತದೆ ಎಂದು ಒತ್ತಿ ಹೇಳಿ, ಮುಂಚಿತವಾಗಿ ಮತ್ತು ವಿವರವಾಗಿ ಯೋಜಿಸುವ ಮಹತ್ವವನ್ನು ಅವರು ಸಾಧಿಸಿ ತೋರಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ವಹಿಸಿದ್ದರು. ಬೆಂಗಳೂರಿನ ರೇಷ್ಮೆ ಕೃಷಿ ನಿರ್ದೇಶಕಿ ಮತ್ತು ಪಶುಸಂಗೋಪನಾ ಆಯುಕ್ತೆ ಶ್ರೀಮತಿ ಶ್ರೀರೂಪ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಹಿಳೆಯರ ವಿಶಿಷ್ಟ ಸಾಮರ್ಥ್ಯಗಳನ್ನು, ಪ್ರೀತಿ, ಶಾಂತಿ, ನಂಬಿಕೆ ಮತ್ತು ತಾಳ್ಮೆಯನ್ನು ಬೆಳೆಸುವಲ್ಲಿ ಹಾಗೂ ಅವರ ಪಾತ್ರಗಳ ಮಹತ್ವವನ್ನು ತಿಳಿಸಿದರು.

ಆಚರಣೆಯ ಭಾಗವಾಗಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ವಿವಿಧ ಕ್ಷೇತ್ರಗಳಲ್ಲಿ ನೀಡಿದ ಕೊಡುಗೆಗಳಿಗಾಗಿ ಐದು ಗಣ್ಯ ಮಹಿಳೆಯರನ್ನು ಸನ್ಮಾನಿಸಿತು.

1. ಸಹಕಾರ ಕ್ಷೇತ್ರ – ಶ್ರೀಮತಿ ನಾಗಮಣಿ, ಮಾನ್ಯ ಅಧ್ಯಕ್ಷರು, ಯಶಸ್ವಿನಿ ಮಹಿಳಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು.
2. ಸಮಾಜ ಸೇವಾ ಕ್ಷೇತ್ರ – ಶ್ರೀಮತಿ ಸುಶೀಲಮ್ಮ, ಮಾನ್ಯ ಮುಖ್ಯಸ್ಥರು, ಸುಮಂಗಲಿ ಸೇವಾಶ್ರಮ, ಬೆಂಗಳೂರು.
3. ನೃತ್ಯ ಕಲಾ ಕ್ಷೇತ್ರ – ಶ್ರೀಮತಿ ದಿವ್ಯಶ್ರೀ ಎಸ್. ವಟಿ, ಮಾನ್ಯ ವಿದುಷಿ, ನಮ್ಮ ನೃತ್ಯೋದಯ ಭರತನಾಟ್ಯ ಅಕಾಡಮಿ ನೃತ್ಯಶಾಲೆ, ಬೆಂಗಳೂರು.
4. ಆರೋಗ್ಯ ಕ್ಷೇತ್ರ – ಶ್ರೀಮತಿ ಅಲಿಬಿನಾ ಶಂಕರ್, ಮಾನ್ಯ ಕಾರ್ಯನಿರ್ದೇಶಕರು, ಮೊಬೆಲಿಟಿ ಇಂಡಿಯಾ, ಬೆಂಗಳೂರು.
5. ಸೇವಾ ಕ್ಷೇತ್ರ – ಶ್ರೀಮತಿ ಮೇಘನಾ ಜೋಯಿಸ್, ಮಾನ್ಯ ಮುಖ್ಯಸ್ಥರು, ಪ್ರೇರಣ ರಿಸೋರ್ಸ್ ಸೆಂಟರ್, ಬೆಂಗಳೂರು.

ಇವರುಗಳಿಗೆ ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನಿಸಲಾಯಿತು. ಇಂದಿನ ಮಹಿಳಾ ದಿನಾಚರಣೆಯ ಧ್ಯೇಯವಾಕ್ಯವಾಗಿರುವ 'ಪ್ರಕ್ರಿಯೆಯನ್ನು ವೇಗಗೊಳಿಸಿ' ಎಂಬ ವಿಷಯದ ಬಗ್ಗೆ ಹಾಗೂ ರಾಜಮಾತೆ ಅಹಲ್ಯಾಬಾಯಿ ಹೋಳ್ಕರ್ ರವರ ಕುರಿತು ಶ್ರೀಮತಿ ಶೋಭ ಹೆಚ್.ಜಿ ರವರು ಮಾನ್ಯ ಸಂಪಾದಕರು ಸ್ತ್ರೀ ಜಾಗೃತಿ ಪತ್ರಿಕೆ ಇವರು ಅತ್ಯಂತ ಸರಳವಾಗಿ ಮಹತ್ವದ ವಿಷಯ ಕುರಿತು ಉಪನ್ಯಾಸ ನೀಡಿದರು.

ಮಧ್ಯಾಹ್ನ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು ಮಹಿಳಾ ಸಹಕಾರಿಗಳಿಗೆ ಪ್ರೋತ್ಸಾಹಿಸುವುದಕ್ಕಾಗಿ ಸಾಮೂಹಿಕ ಆಟಗಳನ್ನು ಆಡಿಸಿದರು, ಈ ಆಟಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ಸಂಯುಕ್ತ ಸಹಕಾರಿ ವತಿಯಿಂದ ನೀಡಲಾಯಿತು.

ಮಧ್ಯಾಹ್ನ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಮಹಿಳಾ ಯೋಜನೆಗಳ ಸದುಪಯೋಗ ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ. ಭಟ್ ರವರು ವಹಿಸಿದ್ದರು. ಸಂವಾದಕರಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ಕಾರ್ಯನಿರ್ವಹಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಮೀನಾಕ್ಷಿ ಖಂಡಿಮಠ, ಮಾನ್ಯ ಸಿಂಡಿಕೇಟ್ ಸದಸ್ಯರು, ರಾಯಚೂರು ವಿಶ್ವವಿದ್ಯಾನಿಲಯ ಹಾಗೂ ನಿವೃತ್ತ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾಲಯ, ತುಮಕೂರು. ಶ್ರೀಮತಿ ಸೌಮ್ಯ ಮಾನ್ಯ ಪ್ರಾಧ್ಯಾಪಕರು, ಆರ್‌ಐಸಿಎಂ, ಬೆಂಗಳೂರು ಮತ್ತು ಶ್ರೀಮತಿ ಮಾನಸ ಕೃಷ್ಣಪ್ಪ, ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಬೆಂಗಳೂರು ಇವರುಗಳು ಕೇಂದ್ರದಲ್ಲಿ ಮಹಿಳಾ ಅಭಿವೃದ್ಧಿಗಾಗಿ ಇರುವ ಅಭಿವೃದ್ಧಿ ಯೋಜನೆಗಳು, ರಾಜ್ಯದಲ್ಲಿ ಮಹಿಳಾ ಅಭಿವೃದ್ಧಿ ಯೋಜನೆಗಳು ಹಾಗೂ ಮಹಿಳೆಯರು ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಬಹುದಾದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಶ್ರೀಮತಿ ಗಗನ ಕೆ. K.C.S, ಮಾನ್ಯ ಸಹಕಾರಿಗಳ ಉಪನಿಬಂಧಕರು ಹಾಗೂ ಪೀಠಾಧಿಕಾರಿಗಳು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ ಬೆಂಗಳೂರು ಇವರು ಆರೋಗ್ಯದ ಬಗ್ಗೆ ಉಪಯುಕ್ತವಾದ ಮಾಹಿತಿಯನ್ನೊಳಗೊಂಡ ಸಮಾರೋಪ ಭಾಷಣವನ್ನು ನೆರವೇರಿಸಿದರು. ಸದರಿ ಕಾರ್ಯಕ್ರಮದಲ್ಲಿ ವಿವಿಧ ಸೌಹಾರ್ದ ಸಹಕಾರಿ ಸಂಸ್ಥೆಗಳ 135 ಮಹಿಳೆಯರು ಭಾಗವಹಿಸಿದ್ದರು.



**ಕಲಬುರಗಿ :** ದಿನಾಂಕ 18.03.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ, ಬೀದರ ಮತ್ತು ಯಾದಗಿರಿ ಜಿಲ್ಲೆಗಳ ಮಹಿಳಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮಹಿಳಾ ಸಿಬ್ಬಂದಿಗಳಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರಾಂತೀಯ ಕಛೇರಿ ಕಲಬುರಗಿಯ ತರಬೇತಿಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಶಕುಂತಲಾ ಬೆಲ್ದಾಳೆ ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಮಹಿಳಾ ಮಹಾಮಂಡಳ ಬೆಂಗಳೂರು ಮತ್ತು ನಿರ್ದೇಶಕರು, ಡಿಸಿಸಿ ಬ್ಯಾಂಕ್ ಬೀದರ ಇವರು ನೇರವೆರಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್, ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಉಪನ್ಯಾಸಕರಾದ ಡಾ॥ ನಿರ್ಮಲಾ ಕೇಳಮನಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ನುಡಿದರು. ಸ್ವಾಗತವನ್ನು ಶ್ರೀಮತಿ ಶ್ರೀದೇವಿಯವರು, ನಿರೂಪಣೆಯನ್ನು ಶ್ರೀ ವೀರಶೆಟ್ಟಿಯವರು ನಿರ್ವಹಿಸಿರು.

**ಮಹಿಳಾ ಸಾಧಕಿಯರಿಗೆ ಸನ್ಮಾನ.**

1. ವೈದ್ಯಕೀಯ ಕ್ಷೇತ್ರ : ಡಾ॥ ಅರುಂಧತಿ ಪಾಟೀಲ ಮಕ್ಕಳ ಮತ್ತು ನರರೋಗ ತಜ್ಞರು, ಕಲಬುರಗಿ.
2. ಕಲಾ ಕ್ಷೇತ್ರ : ಶ್ರೀಮತಿ ಸುಮಂಗಲಾ ಚಕ್ರವರ್ತಿ ರಾಜ್ಯ ಕಾರ್ಯಕಾರಿಣಿ ಸದಸ್ಯರು ಮಹಿಳಾ ಪತಂಜಲಿ ಯೋಗ ಸಮಿತಿ.
3. ಸಾಹಿತಿ : ಡಾ॥ ಅಂಬುಜಾ ಮಳಖೇಡ್ಕರ್ ಹಿಂದಿ ಲೇಖಕರು ಮತ್ತು ಅನುವಾದಕರು.
4. ಸಮಾಜ ಸೇವೆ : ಶ್ರೀಮತಿ ಲಕ್ಷ್ಮಿ ಎಸ್ ಸಿಂಪಿ ವಿವಿಧ ಕೌಶಲ್ಯ ತರಬೇತಿದಾರರು, ಸೇಡಂ.
5. ರೈತ ಮಹಿಳೆ : ಜ್ಯೋತಿ ಎಸ್. ಪಾಟೀಲ ಪ್ರಗತಿಪರ ರೈತ ಮಹಿಳೆ
6. ಸಮಾಜ ಸೇವೆ : ನಿಂಗಮ್ಮ ಬಕ್ಕಪ್ಪ ಮಡಿವಾಳಕರ್ ಸೂಲಗಿತ್ತಿ
7. ಸಮಾಜ ಸೇವೆ : ಸುವರ್ಣ ಹೊಸಮನಿ, ಶಿಕ್ಷಕರು ಬೀದರ
8. ಸೇವಾ ಕ್ಷೇತ್ರ : ಹೇಮಾವತಿ ಪಾಕಲ್ ಬೀದರ

ಈ ಮೇಲಿನ ಎಲ್ಲಾ ಮಹಿಳಾ ಸಾಧಕಿಯರಿಗೆ ಸಂಯುಕ್ತ ಸಹಕಾರಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಬೀದರ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಂದ 95 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.



**ಮೈಸೂರು :** ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಮಂಡ್ಯ ಹಾಗೂ ಚಾಮರಾಜನಗರ ಸೌಹಾರ್ದ ಸಹಕಾರಿಗಳಲ್ಲಿನ ಮಹಿಳಾ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಮುಖ್ಯಕಾರ್ಯನಿರ್ವಾಹಕರು & ಮಹಿಳಾ ಸಿಬ್ಬಂದಿಗಳಿಗಾಗಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದಿನಾಂಕ: 15.03.2025 ರ ಶನಿವಾರ ಬೆಳಿಗ್ಗೆ 10.30 ಗಂಟೆಗೆ ಮಾಯಾಸ್ ಕಿಂಗ್ಸ್ ಕೋರ್ಟ್ ಹೋಟೆಲ್, ಜೆ.ಎಲ್.ಬಿ.ರಸ್ತೆ, ಮೆಟ್ರೋಪೋಲ್ ಸರ್ಕಲ್, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯ ಮೇಲೆ ಉಪಸ್ಥಿತರಿದ್ದ ಗಣ್ಯರೊಂದಿಗೆ ಮಾನ್ಯ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರಾದ ಶ್ರೀಮತಿ ತೇಜಸ್ವಿನಿ ಎಸ್ ರವರು ಉದ್ಘಾಟಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ರವರು ವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು, ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರು ಹಾಗೂ ಮಾನ್ಯ ಮಾಜಿ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ್‌ರವರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ ರವರು ಭಾಗವಹಿಸಿದ್ದರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು, ಕಾರ್ಯಕ್ರಮದ ಸ್ವಾಗತವನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುರೇಶ ಆರ್ ಎಸ್ ರವರು ಹಾಗೂ ವಂದನಾರ್ಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ್ ಎನ್ ಇವರು ನೆರವೇರಿಸಿದರು.

ಕಾರ್ಯಕ್ರಮದ ಮೊದಲನೆಯ ಅವಧಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಯಾದ ಶ್ರೀಮತಿ ಮಮತಾ ರವರು ಸರ್ಕಾರದಿಂದ ಮಹಿಳೆಯರಿಗಾಗಿ ಇರುವ ಸೌಲಭ್ಯಗಳು/ಯೋಜನೆಗಳ ಕುರಿತು ಎಂಬ ವಿಷಯದ ಕುರಿತು, ಎರಡನೆಯ ಅವಧಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿಯಾದ ಶ್ರೀ ಮಂಜುನಾಥ ಡಿ ರವರು ಮಹಿಳೆಯರಿಗೆ ಅನ್ವಯಿಸುವ ಕಾಯ್ದೆ ಕಾನೂನುಗಳು ವಿಷಯದ ಕುರಿತು ಹಾಗೂ ಮಧ್ಯಾಹ್ನ ಅವಧಿಯಲ್ಲಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ಮಾನ್ಯ ಪ್ರಾಂಶುಪಾಲರಾದ ಶ್ರೀಮತಿ ಡಾ. ರೇಣುಕಾ ರವರು ಸಹಕಾರಿಯ ಸಂಸ್ಥೆಯ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರದ ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 112 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.



**ಕೊಪ್ಪಳ :** ದಿನಾಂಕ 21.03.2025 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಸಂಕಲ್ಪ ಮಹಿಳಾ ಮಹಾವಿದ್ಯಾಲಯ ಇವರ ಸಂಯುಕ್ತಾಶ್ರಯದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಕಲ್ಪ ಮಹಿಳಾ ಮಹಾವಿದ್ಯಾಲಯ ಗಂಗಾವತಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಆನೆಗುಂದಿ ರಾಜಮನೆತನದ ಮಾತೋಶ್ರೀ ಲಲಿತಾರಾಣಿ ಶ್ರೀರಂಗದೇವರಾಯಲು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ವಹಿಸಿದ್ದರು. ಮುಖ್ಯಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿಯವರು, ಕೊಪ್ಪಳ ಜಿಲ್ಲಾ ಒಕ್ಕೂಟದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಪತ್ತಾರ ರವರು, ಸಂಕಲ್ಪ ಮಹಿಳಾ ಮಹಾವಿದ್ಯಾಲಯ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಮಂಜುನಾಥ ಸ್ವಾಮಿ ಎಮ್.ಆರ್ ಮತ್ತು ಕಾರ್ಯದರ್ಶಿ ಬಸವರಾಜರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ 150 ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



**ದಕ್ಷಿಣ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿ ಇದರ ವತಿಯಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮಹಿಳಾ ಅಧ್ಯಕ್ಷರು, ನಿರ್ದೇಶಕರು ಮತ್ತು ಮಹಿಳಾ ಸಿಬ್ಬಂದಿಗಳಿಗಾಗಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ದಿನಾಂಕ: 22.03.2025ರಂದು ಹೋಟೆಲ್ ಶ್ರೀನಿವಾಸ ಇದರ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಪ್ರಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮವನ್ನು ಮಂಗಳೂರು ನಗರದ ಸಹಾಯಕ ಪೋಲಿಸ್ ಆಯುಕ್ತರಾದ ಶ್ರೀಮತಿ ಗೀತಾ ಕುಲಕರ್ಣಿ ರವರು ಉದ್ಘಾಟಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ವಹಿಸಿದ್ದರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಮಂಜುನಾಥ್ ಎಸ್.ಕೆ ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ ಇವರು ಭಾಗವಹಿಸಿದ್ದರು. ಇದೆ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಶ್ರೀಮತಿ ರೋಹಿಣಿ ಸಾಲಿಯಾನ್, ಶ್ರೀಮತಿ ಸರಳಾ ಕಾಂಚನ್, ಶ್ರೀಮತಿ ಶಾರದಾಮಣಿ ಶೇಖರ್ ಮತ್ತು ಶ್ರೀಮತಿ ವೃಂದಾ ಇವರುಗಳಿಗೆ ಸಂಯುಕ್ತ ಸಹಕಾರಿಯಿಂದ ಸನ್ಮಾನಿಸಲಾಯಿತು.

ಸಭೆಯ ಪ್ರಥಮ ಅವಧಿಯಲ್ಲಿ ಸರ್ಕಾರದಿಂದ ಮಹಿಳೆಯರಿಗಾಗಿ ಇರುವ ಸೌಲಭ್ಯಗಳು/ಯೋಜನೆಗಳ ಕುರಿತು ಶ್ರೀಮತಿ ಹರ್ಷಿತಾ, ಮಾನ್ಯ ಕೌನ್ಸಿಲರ್, ಸಖಿ ಒನ್ ಸೆಂಟರ್, ಮಂಗಳೂರು ಇವರು ಮಾಹಿತಿಯನ್ನು ನೀಡಿದರು, ನಂತರದ ಅವಧಿಯಲ್ಲಿ ಮಹಿಳೆಯರಿಗೆ ಅನ್ವಯಿಸುವ ಕಾಯ್ದೆ ಕಾನೂನುಗಳ ಕುರಿತು ಶ್ರೀಮತಿ ಪ್ರಿಯಾ ರಾಜಮೋಹನ್, ಮಾನ್ಯ ಆಡಳಿತ ಅಧಿಕಾರಿಗಳು, ಸಖಿ ಸ್ಟಾಪ್ ಒನ್ ಸೆಂಟರ್, ಮಂಗಳೂರು ಇವರು ಮಾಹಿತಿ ನೀಡಿದರು. ಮೂರನೆ ಅವಧಿಯಲ್ಲಿ ಸಹಕಾರ ಸಂಸ್ಥೆಗಳ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಇದರ ಕುರಿತು ಶ್ರೀಮತಿ ಬಿಂದು ಬಿ ನಾಯರ್, ಮಾನ್ಯ ಉಪನ್ಯಾಸಕರು. ಕೆ.ಐ.ಸಿ.ಎಂ ಮೂಡಬಿದ್ರೆ ಇವರು ಮಾಹಿತಿ ನೀಡಿದರು. ನಂತರದಲ್ಲಿ ಭಾಗವಹಿಸಿದ ಪ್ರತಿನಿಧಿಗಳಿಗೆ ವಿವಿಧ ಆಟಗಳನ್ನು ಆಯೋಜನೆ ಮಾಡುವ ಮೂಲಕ ಅವರ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಮಾರ್ಗದರ್ಶನ ನೀಡಲಾಯಿತು. ಸದರಿ ಸಭೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವಿವಿಧ ಸೌಹಾರ್ದ ಸಹಕಾರಿಗಳಿಂದ ಸುಮಾರು 104 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.



ಉದ್ಘಾಟನೆ

**ಬೆಳಗಾವಿ :** ದಿನಾಂಕ 22–03–2025, ಶನಿವಾರದಂದು ಬೆಳಗಾವಿ ಪ್ರಾಂತದ ಸೌಹಾರ್ದ ಸಹಕಾರಿಗಳ ಮಹಿಳಾ ನಿರ್ದೇಶಕರಿಗೆ ಮತ್ತು ಮಹಿಳಾ ಸಿಬ್ಬಂದಿಗಳಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚಾರಣೆಯನ್ನು ಮಹಾಂತ ಭವನ, ಮಹಾಂತೇಶ ನಗರ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟಕರಾಗಿ ಬೆಳಗಾವಿಯ ಹೆಚ್ಚುವರಿ ಪೋಲಿಸ್ ಅಧೀಕ್ಷಕರಾದ ಶೃತಿ ಎನ್. ಎಸ್. ಇವರು, ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ಇವರು ಮುಖ್ಯ ಅತಿಥಿಗಳಾಗಿ ಡಾ॥ ಸ್ವಾತಿ ಗೌಡರ ಸಹಾಯಕ ಪ್ರಾಧ್ಯಾಪಕರು ಹಾಗೂ ಸ್ತ್ರೀರೋಗ ತಜ್ಞರು ಇವರು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಹೆಚ್ಚುವರಿ ಪೋಲಿಸ್ ಅಧಿಕ್ಷಕರಾದ ಶೃತಿ ಎನ್ ಎಸ್ ಇವರು ಮಹಿಳೆಯರು ಸ್ವಾಲಂಬನೆ ಬದುಕು ಕಟ್ಟಿಕೊಳ್ಳಲು ಸಶಕ್ತರಿದ್ದು, ಕಾಯಕವನ್ನು ನಿಷ್ಠೆಯಿಂದ ಮಾಡಿದಲ್ಲಿ ಯಶಸ್ಸು ಸಾಧ್ಯವಿದೆ, ಮಹಿಳೆಯರು ಸೈಬರ ವಂಚನೆಗೆ ಒಳಗಾಗುತ್ತಿದ್ದು ಮೊಬೈಲ್ ಬಳಸುವಾಗ ಎಚ್ಚರಿಕೆಯಿಂದ ಇರಲು ತಿಳಿಸಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ಇವರು ಮಾತನಾಡುತ್ತಾ ಸಹಕಾರಿ ಕ್ಷೇತ್ರ ಹಾಗೂ ಸೌಹಾರ್ದ ಕಾಯ್ದೆ ಹಿನ್ನಲೆ ಕುರಿತು ಮಾಹಿತಿ ನೀಡಿ ಸಹಕಾರಿ ಕ್ಷೇತ್ರದಲ್ಲಿ ಮಹಿಳೆಯರ ಅಭಿವೃದ್ದಿಗೆ ಪೂರಕ ವಾತಾವರಣವಿದ್ದು ಮಹಿಳೆಯರು ಸದುಪಯೋಗ ಪಡೆದುಕೊಂಡಲ್ಲಿ ದೇಶದ ಹಾಗೂ ಕುಟುಂಬದ ಆರ್ಥಿಕ ಅಭಿವೃದ್ದಿ ಸಾಧ್ಯವೆಂದು ತಿಳಿಸಿದರು. ಸಹಾಯಕ ಪ್ರಾಧ್ಯಾಪಕರು ಹಾಗೂ ಸ್ತ್ರೀರೋಗ ತಜ್ಞರಾದ ಡಾ॥ ಸ್ವಾತಿ ಗೌಡರ ಇವರು ಗರ್ಭಕೋಶದ ಕ್ಯಾನ್ಸರ, ಸ್ತನ ಕ್ಯಾನ್ಸರ ಕುರಿತು ಉಪನ್ಯಾಸ ನೀಡಿದರು.

ಮಹಿಳಾ ದಿನಾಚಾರಣೆ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಮಹಿಳಾ ಸಾಧಕಿಯರಿಗೆ ಸಂಯಕ್ತ ಸಹಕಾರಿ ವತಿಯಿಂದ ಸನ್ಮಾನ ಮಾಡಲಾಯಿತು

1. ಆರೋಗ್ಯ ಕ್ಷೇತ್ರ : ಡಾ॥ ಯೇಶಿತಾ ಪೂಜಾರ, ಸ್ತ್ರೀರೋಗ ತಜ್ಞರು ಹಾಗೂ ಹೆಚ್.ಓ.ಡಿ, ಜೆ.ಎನ್.ಎಮ್.ಸಿ ಬೆಳಗಾವಿ
2. ಉದ್ಯಮಕ್ಷೇತ್ರ : ಡಾ ಜಯಶ್ರೀ ಹಿರೇಮಠ, ಜಯಶ್ರೀ ಹೊಮ್ ಇಂಡಸ್ಟ್ರೀಸ್ & ಹ್ಯಾಂಡಿಕ್ರಾಫ್ಟ್ಸ್, ಗದಗ
3. ಕ್ರೀಡಾಕ್ಷೇತ್ರ : ಶ್ರೀಮತಿ ಮಾಯವ್ವ ಎಸ್, ಅಂತರರಾಷ್ಟ್ರೀಯ ಪ್ಯಾರಾಕ್ರೀಡಾಪಟು, ತಾವಲಗೇರಿ, ತಾ:ಸವದತ್ತಿ
4. ಕಲಾ ಕ್ಷೇತ್ರ : ವಿದುಷಿ ಕು. ರಜನಿ. ಎಲ್. ಕರಿಗಾರ, ಹಿಂದುಸ್ತಾನಿ ಶಾಸ್ತ್ರೀಯ ಹಾಗೂ ಸುಗಮ ಸಂಗೀತ ಕ್ಷೇತ್ರ, ರಾಣೆಬೆನ್ನೂರು
5. ಕೃಷಿ ಕ್ಷೇತ್ರ : ಡಾ॥ ದ್ರಾಕ್ಷಾಯಿಣಿ. ಗೌಡರ, ಸಾವಯವ ಕೃಷಿಕರು, ಸಾ॥ ಅಮಿನಬಾವಿ, ಧಾರವಾಡ



ಡಾ॥ ಪ್ರಭಾಕರ ಕೊರೆ, ಕೆ.ಎಲ್.ಇ ಕಾನ್ಸರ್ ಆಸ್ಪತ್ರೆ, ಬೆಳಗಾವಿ ಹಾಗೂ ಸಂಯುಕ್ತ ಸಹಕಾರಿಯ ಸಂಯುಕ್ತಾಶ್ರಯದಲ್ಲ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ

ಮಧ್ಯಾಹ್ನ ಅವಧಿಯಲ್ಲಿ ಡಾ॥ ಪ್ರಭಾಕರ ಕೊರೆ, ಕೆ.ಎಲ್.ಇ ಕಾನ್ಸರ್ ಆಸ್ಪತ್ರೆ, ಬೆಳಗಾವಿ ಹಾಗೂ ಸಂಯುಕ್ತ ಸಹಕಾರಿಯ ಸಂಯುಕ್ತಾಶ್ರಯದಲ್ಲಿ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣೆ ಏರ್ಪಡಿಸಲಾಗಿತ್ತು. 98 ಮಹಿಳೆಯರು ಉಚಿತ ಆರೋಗ್ಯ ತಪಾಸಣೆಯ ಪ್ರಯೋಜನ ಪಡೆದರು. ಮಹಿಳಾ ಪ್ರತಿನಿಧಿಗಳಿಗೆ ಸಮೂಹ ಚಟುವಟಿಕೆಗಳನ್ನು ಆಯೋಜಿಸಿ, ವಿಜೇತರಿಗೆ ಬಹುಮಾನಗಳನ್ನು ನೀಡಲಾಯಿತು. ಕಾರ್ಯಕ್ರಮದ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ ಇವರು ನಡೆಸಿಕೊಟ್ಟರು. ಕಾರ್ಯಕ್ರಮವನ್ನು ಶ್ರೀಮತಿ ಅಶ್ವಿನಿ ಕಮ್ಮಾರ ನಿರೂಪಿಸಿದರು, ಶ್ರೀಮತಿ ರೇಶ್ಮಾ ಪಾಟೀಲ ವಂದಿಸಿದರು. ಸಾಧಕಿಯರ ಕಿರು ಪರಿಚಯವನ್ನು ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶೋಭಾ ಆರ್. ನಡೆಸಿಕೊಟ್ಟರು. ಶ್ರೀಮತಿ ಮಲ್ಲಮ್ಮ, ವಿಜಯಲಕ್ಷ್ಮೀ ಹಾಗೂ ಹೇಮಾ ಪ್ರಾರ್ಥಿಸಿದರು. ಸಾಯಂಕಾಲ ಜರುಗಿದ ಸಮಾರೋಪ ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ಹಾಗೂ ಶ್ರೀಮತಿ ರಂಜನಾ ಪೋಳ, ಪೀಠಾಧಿಕಾರಿಗಳು, 441 ದಾವಾ ಪಂಚಾಯಿತಿ ನ್ಯಾಯಾಲಯ ಬೆಳಗಾವಿ, ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 67 ಸೌಹಾರ್ದ ಸಹಕಾರಿಗಳಿಂದ 185 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು.

# ಸಂಯುಕ್ತ ಸಹಕಾರಿಯ ನೂತನ ಸಿಬ್ಬಂದಿಯವರಿಗಾಗಿ 5 ದಿನಗಳ "ಪ್ರವೇಶ ತರಬೇತಿ" ಕಾರ್ಯಕ್ರಮ

## ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ಸೌಹಾರ್ದ ಸಹಕಾರಿ ರಚನೆಯಾಗಬೇಕು, ಗುಣಮಟ್ಟ ಉನ್ನತವಾಗಿರಬೇಕು – ಶ್ರೀ ಜಿ. ನಂಜನಗೌಡ ಸಿಎ



ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿಎ ಇವರಿಂದ ಉದ್ಘಾಟನೆ



ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ ಇವರೊಂದಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಸಂಸ್ಥೆಗೆ ನೂತನವಾಗಿ ನೇಮಕಗೊಂಡಿರುವ 29 ಸಿಬ್ಬಂದಿಯವರಿಗಾಗಿ ಪ್ರವೇಶ ತರಬೇತಿ ಕಾರ್ಯಾಕ್ರಮವನ್ನು ದಿನಾಂಕ 17–03–2025 ರಿಂದ 21–03–2025 ರವರಗೆ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ಸೌಹಾರ್ದ ಸಹಕಾರಿ ಸೌಧ, ತರಬೇತಿ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ನೂತನವಾಗಿ ನೇಮಕಗೊಂಡಿರುವ ಸಿಬ್ಬಂದಿಯವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಬೇಕು. ಶಿಸ್ತು, ದಕ್ಷತೆಯಿಂದ ಕಾರ್ಯನಿರ್ವಹಿಸಿ ನಿಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರ ಜೊತೆಗೆ ಸಂಯುಕ್ತ ಸಹಕಾರಿಗೆ ಒಳ್ಳೆಯ ಹೆಸರನ್ನು ತರಬೇಕು ಎಂದು ಹೇಳಿದರು. ನಂತರ ಆರ್ಥಿಕ ಶಿಸ್ತಿನಲ್ಲಿ ಸಿಬ್ಬಂದಿಗಳ ಪಾತ್ರದ ಕುರಿತು ಉಪನ್ಯಾಸವನ್ನು ನೀಡಿದರು. ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಯುಕ್ತ ಸಹಕಾರಿಯ ಪ್ರಗತಿ ಸೌಹಾರ್ದ ಸಹಕಾರಿ ಕ್ಷೇತ್ರ ಬೆಳೆದದಂತೆಲ್ಲಾ ಬೆಳೆಯುತ್ತದೆ. ಆಗಿಂದ್ದಾಗೆ ಹೊಸ ಹೊಸ ಸಿಬ್ಬಂದಿಯವರನ್ನು ನೇಮಕಮಾಡಿಕೊಳ್ಳುವುದು ಅವಶ್ಯಕವಾಗುತ್ತದೆ. ನೇಮಕಗೊಂಡ ಸಿಬ್ಬಂದಿಯವರಿಗೆ ಅವರ ಕೆಲಸದ ಬಗ್ಗೆ ಮಾಹಿತಿಯನ್ನು ನೀಡುವುದು ಮತ್ತು ಸಂಯುಕ್ತ ಸಹಕಾರಿ ಬಗ್ಗೆ ಮಾಹಿತಿ ನೀಡುವುದು ಅವರ ಕೌಶಲ್ಯವನ್ನು ಅಭಿವೃದ್ಧಿ ಪಡಿಸುವುದು ಅಗತ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ನೇಮಕಗೊಂಡ 29 ಸಿಬ್ಬಂದಿಯವರಿಗೆ 5 ದಿನಗಳ ವಿಶೇಷ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಪ್ರಾರಂಭದಲ್ಲಿ ಶ್ರೀಮತಿ ಹರ್ಷಪ್ರಭಾ ರವರು ಪ್ರಾರ್ಥನೆಯನ್ನು ನೆರವೇರಿಸಿದರು. ತರಬೇತಿ ಅಧಿಕಾರಿಯದ ಶ್ರೀ ಶಿವಕುಮಾರ ಬಿರಾದಾರ ರವರು ಸ್ವಾಗತವನ್ನು ಕೋರಿದರು.

5 ದಿನಗಳ ಪ್ರವೇಶ ತರಬೇತಿ ಕಾರ್ಯಾಕ್ರಮದಲ್ಲಿ ಸಮಗ್ರ ಸಹಕಾರ ಕ್ಷೇತ್ರ, ಸೌಹಾರ್ದ ಸಹಕಾರಿ ಕಾಯ್ದೆ, ಹುಟ್ಟು ಬೆಳವಣಿಗೆ, ಆಶಯ, ಸಹಕಾರ ಇಲಾಖೆಯ ಸ್ವರೂಪ, ವಿವಿಧ ಸಹಕಾರಿ ಸಂಸ್ಥೆಗಳ ಪರಿಚಯ ಸೇರಿದಂತೆ ಒಟ್ಟಾರೆಯಾಗಿ 15 ವಿಷಯಗಳನ್ನು 21 ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಿದ್ದಾರೆ.

ಈ ಕಾರ್ಯಕ್ರಮದಲ್ಲಿ ವಿಶೇಷವಾಗಿ ಬೆಳಿಗ್ಗೆ ಪ್ರಾರಂಭಿಕ ಚಟುವಟಿಕೆಗಳಾದ ಪ್ರಾರ್ಥನೆ, ಸುವಿಚಾರ, ಮಿಲಿ ಹಾಗೂ ಇನ್ಸ್‌ಸ್ಟಂಟ್ ಮಿಲಿ ನಡೆಸುವುದರ ಮೂಲಕ ಒಟ್ಟು 4 ತಂಡಗಳಾಗಿ ವಿಗಂಡಿಸಲಾಗಿತ್ತು. ಪ್ರತಿ ತಂಡದವರು ಪ್ರತಿ ದಿನದ ವರದಿಯನ್ನು ಸಲ್ಲಿಸುವ ಕಾರ್ಯವನ್ನು ಹಮ್ಮಿಕೊಂಡು ಅವರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿ ಶಿಬಿರವನ್ನು ನಡೆಸಲಾಗಿದೆ.

ಪ್ರವೇಶ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವು ದಿನಾಂಕ 21–03–2025 ರಂದು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ ರವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಸಂಯುಕ್ತ ಸಹಕಾರಿಯು ಒಂದು ಶಾಸನಾತ್ಮಕ ಸಂಸ್ಥೆ, ಇಲ್ಲಿ ಆಡಳಿತ ಹಾಗೂ ಎಲ್ಲಾ ಕಾರ್ಯಚಟುವಟಿಕೆಗಳು ಪಾರದರ್ಶಕವಾಗಿ ಮತ್ತು ವೃತ್ತಿ ಪರತೆಯಿಂದ ಕೂಡಿರಬೇಕು ಎಂದು ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದ್ದರು.

ಸಂಸ್ಥೆಯಲ್ಲಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹಿರಿಯ ಅಧಿಕಾರಿಗಳು ತಮ್ಮ ಅನುಭವದ ಆಧಾರದ ಮೇಲೆ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಉನ್ನತ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗೆಯೇ ಪ್ರಸಕ್ತ ತರಬೇತಿಯಲ್ಲಿ 29 ಜನ ನೂತನ ಸಿಬ್ಬಂದಿಗಳು ತಮ್ಮ ವೃತ್ತಿ ಜೀವನದಲ್ಲಿ ಹಾಗೂ ವೈಯಕ್ತಿಕ ಜೀವನದಲ್ಲಿ ಪಾರದರ್ಶಕತೆ ಹಾಗೂ ವೃತ್ತಿ ಪರತೆಯನ್ನು ಬೆಳೆಸಿಕೊಂಡು ಸಂಯುಕ್ತ ಸಹಕಾರಿಯ ಆಸ್ತಿಯಾಗಿ ಹೊರಹೊಮ್ಮಬೇಕು ಎಂದು ತಿಳಿಸಿದರು.

ಸಮಾರೋಪ ಭಾಷಣವನ್ನು ಮಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ಮಾತನಾಡಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಎಲ್ಲಾ

ನೂತನ ಸಿಬ್ಬಂದಿಗಳನ್ನು ಅತ್ಯಂತ ಪಾರದರ್ಶಕವಾಗಿ ಆಯ್ಕೆಯನ್ನು ಮಾಡಿದೆ. ಉತ್ತಮವಾಗಿ ಕೆಲಸ ಕಾರ್ಯಗಳನ್ನು ಮಾಡುವ ಮೂಲಕ ಸಂಸ್ಥೆಯ ಅಭಿವೃದ್ಧಿಗೆ ಕಾರಣಕರ್ತರಾಗುವುದರ ಜೊತೆಗೆ ತಮ್ಮ ವೃತ್ತಿ ಜೀವನವನ್ನು ರೂಪಿಸಿಕೊಳ್ಳಬೇಕು. ನೂತನ ಸಿಬ್ಬಂದಿಗಳು ಹಾಲಿ ಇರುವ ಸಿಬ್ಬಂದಿಗಳ ಮಾರ್ಗದರ್ಶನ ಪಡೆದು ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ತಿಳಿಸಿದರು. ಅಂತಿಮವಾಗಿ ನೂತನ ಸಿಬ್ಬಂದಿಯಾದ ಶ್ರೀ ಬಾಬು ಪಠಾಣ ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತ್ತು.

## ಯಶಸ್ವಿನಿ ಯೋಜನೆ ಕುರಿತು ಸಂಪರ್ಕ ಸಭೆ




**ಬೆಂಗಳೂರು** : ದಿನಾಂಕ 12.03.2025ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಮಲ್ಲೇಶ್ವರಂ, ಬೆಂಗಳೂರು ಇಲ್ಲಿ ಯಶಸ್ವಿನಿ ಯೋಜನೆಗೆ ಸಂಬಂಧಿಸಿದಂತೆ ಸಂಪರ್ಕ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಉಮೇಶ್, ಮಾನ್ಯ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರು ವಹಿಸಿದ್ದರು. ಸಭೆಯಲ್ಲಿ ಉಪಸ್ಥಿತರಿದ್ದ ಗಣ್ಯರನ್ನು ಶ್ರೀ ಸಲೀ ಬಿ.ಕೆ. ಮಾನ್ಯ ಉಪನಿಬಂಧಕರು, ಬೆಂಗಳೂರು 2ನೇ ವಲಯ ಇವರು ಸ್ವಾಗತಿಸಿದರು. ಮಾನ್ಯ ಜಂಟಿ ನಿಬಂಧಕರಿಗೆ ಸಹಕಾರಿ ಶಾಲು ಹೊದಿಸಿ ಗೌರವಿಸಲಾಯಿತು. ಸಭೆಯಲ್ಲಿ ಶ್ರೀ ನಂಜನಗೌಡ ಜಿ. ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು, ಶ್ರೀಮತಿ ಮಾನಸ ಕೃಷ್ಣಪ್ಪ, ಮಾನ್ಯ ಉಪ ನಿಬಂಧಕರು, 1ನೇ ವಲಯ, ಬೆಂಗಳೂರು, ಶ್ರೀ ಶಶಿಧರ್ ಪಿ. ಮಾನ್ಯ ಉಪ ನಿಬಂಧಕರು, 4ನೇ ವಲಯ, ಬೆಂಗಳೂರು, ಶ್ರೀ ಚಂದ್ರಶೇಖರ್, ಮಾನ್ಯ ಉಪ ನಿಬಂಧಕರು, ಬೆಂಗಳೂರು ಗ್ರಾಮಾಂತರ, ಶ್ರೀಮತಿ ಕವಿತಾ ಎಸ್.ಕೆ. ಮಾನ್ಯ ಉಪನಿಬಂಧಕರು, ರಾಮನಗರ, ಶ್ರೀ ಮಧು ಶ್ರೀನಿವಾಸ್, ಮಾನ್ಯ ಉಪನಿಬಂಧಕರು, ದಾವಣಗೆರೆ, ಶ್ರೀ ಕಿಶೋರ್ ಕುಮಾರ್ ಜೋಷಿ, ಮಾನ್ಯ ಉಪನಿಬಂಧಕರು, ಕೋಲಾರ, ಶ್ರೀ ಹೆಚ್. ಮೂರ್ತಿ, ಮಾನ್ಯ ಉಪನಿಬಂಧಕರು, ತುಮಕೂರು, ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು, ಶ್ರೀ ಶ್ರೀಧರ್, ಪ್ರಾಂತೀಯ ಅಧಿಕಾರಿಗಳು, ಬೆಂಗಳೂರು ಪ್ರಾಂತೀಯ ಕಛೇರಿ ಇವರು ಉಪಸ್ಥಿತರಿದ್ದರು. ಬೆಂಗಳೂರು ನಗರದ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಹಾಗೂ ಬೆಂಗಳೂರು ವಿಭಾಗದ ಸಿಬ್ಬಂದಿಗಳು ಭಾಗವಹಿಸಿದ್ದರು.

## ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ



**ಮಂಡ್ಯ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮೈಸೂರು ಪ್ರಾಂತೀಯ ಕಛೇರಿ ವತಿಯಿಂದ ಮಂಡ್ಯ ಜಿಲ್ಲೆಯಲ್ಲಿರುವ ಎಲ್ಲ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು/ ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗೆ "ಕ್ಲಸ್ಟರ್ ಮಟ್ಟದ ತರಬೇತಿ ಕಾರ್ಯಕ್ರಮ"ವನ್ನು ದಿನಾಂಕ: 14.03.2025ರಂದು "ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಎಂ ಲಿಂಗಯ್ಯ ಬಿಲ್ಡಿಂಗ್, 1ನೇ ಮಹಡಿ, ವಿ ವಿ ರಸ್ತೆ, ಮಂಡ್ಯ ಈ ಕಚೇರಿಯಲ್ಲಿ ಆಯೋಜಿಸಲಾಗಿತ್ತು.

ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀಮತಿ ಶೈಲಜಾ ತಪಲಿ, ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಉದ್ಘಾಟಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಭಾರತಿ ಜಿ ಭಟ್ ಇವರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ಗುರುರಾಜ್ ಬಿ ಟಿ, ಮಾನ್ಯ ಅಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇವರು ವಹಿಸಿದ್ದರು. ಶ್ರೀ ಸಿದ್ದಲಿಂಗಯ್ಯ ಎಸ್, ಉಪಾಧ್ಯಕ್ಷರು, ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಹಾಗೂ ಶ್ರೀ ಗುರುಪ್ರಸಾದ್ ಬಂಗೇರಾ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ವ್ಯವಸ್ಥಾಪಕರು, ಇವರು ನುಡಿದರು. ಕಾರ್ಯಕ್ರಮದ ಸ್ವಾಗತ, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಇವರು ಮಾಡಿದರು.

ಈ ಕಾರ್ಯಾಗಾರದಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ವ್ಯವಹಾರ ಅಭಿವೃದ್ಧಿ ಯೋಜನೆಯ ಕುರಿತು ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಶ್ರೀ ರಮೇಶ್ ಕುಮಾರ್ ರವರು ಉಪನ್ಯಾಸವನ್ನು ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 20 ಸೌಹಾರ್ದ ಸಹಕಾರಿಗಳಿಂದ 28 ಪ್ರತಿನಿಧಿಗಳು ಭಾಗವಹಿಸಿದ್ದರು.

## ಭೇಟಿ



**ದಾವಣಗೆರೆ :** ದಿನಾಂಕ 06.03.2025ರಂದು ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿ ಸಂಘಗಳ ಒಕ್ಕೂಟ ನಿ., ಇದರ ವತಿಯಿಂದ ದಾವಣಗೆರೆ ನಗರದ ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ ನೀಡಲಾಯಿತು. ಭೇಟಿಯ ಸಂದರ್ಭದಲ್ಲಿ ಜಿಲ್ಲಾ ಒಕ್ಕೂಟದ ಮುಂದಿನ ಯೋಜನೆಗಳ ಬಗ್ಗೆ ಸಹಕಾರಿಗಳಿಗೆ ಅಗತ್ಯ ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್. ಪ್ರಭುದೇವ್‌ರವರು, ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಟಿ. ವೀರೇಶ್‌ರವರು, ಉಪಾಧ್ಯಕ್ಷರಾದ ಶ್ರೀ ಜಿ.ಎಂ. ರುದ್ರೇಗೌಡರವರು, ಜಿಲ್ಲಾ ಒಕ್ಕೂಟದ ನಿರ್ದೇಶಕರು ಹಾಗೂ ಸೌಹಾರ್ದ ಅಭಿವೃದ್ಧಿ ಅದೀಕಾರಿಗಳಾದ ಶ್ರೀ ಉಮೇಶ್ ಎ. ಎಸ್.ರವರು ಉಪಸ್ಥಿತರಿದ್ದರು.




**ಮೈಸೂರು :** ದಿನಾಂಕ : 28.03.2025ರಂದು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ನೂತನ ಆಡಳಿತ ಮಂಡಲಿ ಸದಸ್ಯರ ಸಭೆಯನ್ನು ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಮಾಡಲಾಯಿತು. ಸದರಿ ಸಭೆಯಲ್ಲಿ ಒಕ್ಕೂಟದ ಕಾರ್ಯಚಟುವಟಿಕೆಗಳು ಹಾಗೂ ಅಭಿವೃದ್ಧಿಯ ಬಗ್ಗೆ ಒಕ್ಕೂಟದ ನೂತನ ಆಡಳಿತ ಮಂಡಲಿ ಸದಸ್ಯರಿಗೆ ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಮಾರ್ಗದರ್ಶನ ಮಾಡಿದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಉಪಸ್ಥಿತರಿದ್ದರು.



**ಮೈಸೂರು :** ದಿನಾಂಕ : 28.03.2025ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ರಾಷ್ಟ್ರೀಯ ಸಮೃದ್ಧಿ ಸೌಹಾರ್ದ ಸಹಕಾರಿ ಸಂಘ ನಿ., ಮೈಸೂರು ಸಹಕಾರಿಗೆ ಭೇಟಿ ನೀಡಿ ಸದರಿ ಸಹಕಾರಿಗಳ ಆರ್ಥಿಕ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು, ಸಹಕಾರಿಯ ಅಭಿವೃದ್ಧಿಯ ಕುರಿತು ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ನಿರ್ದೇಶಕರಿಗೆ, ಮುಖ್ಯ ಕಾರ್ಯನಿರ್ವಾಹಕರಿಗೆ ಮತ್ತು ಸಿಬ್ಬಂದಿಯವರಿಗೆ ಮಾರ್ಗದರ್ಶನ ಮಾಡಿದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಉಪಸ್ಥಿತರಿದ್ದರು.



**ಮೈಸೂರು :** ದಿನಾಂಕ : 28.03.2025ರಂದು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ನಿ., ಮೈಸೂರು ಸಹಕಾರಿಗಳಿಗೆ ಭೇಟಿ ನೀಡಲಾಯಿತು. ಸದರಿ ಸಹಕಾರಿಗಳ ಆರ್ಥಿಕ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು, ಸಹಕಾರಿಯ ಅಭಿವೃದ್ಧಿಯ ಕುರಿತು ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ನಿರ್ದೇಶಕರಿಗೆ, ಮುಖ್ಯಕಾರ್ಯನಿರ್ವಾಹಕರಿಗೆ ಮತ್ತು ಸಿಬ್ಬಂದಿಯವರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ರವರು ಮಾರ್ಗದರ್ಶನ ಮಾಡಿದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಉಪಸ್ಥಿತರಿದ್ದರು.

## ಉದ್ಘಾಟನೆ



**ಕೊಪ್ಪಳ** : ದಿನಾಂಕ 30.03.2025ರಂದು ಕೊಪ್ಪಳ ನಗರದಲ್ಲಿ ದಿ ಗ್ಯಾಲಕ್ಸಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್. ಕೊಪ್ಪಳ ಇದರ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ಇವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಆನಂದ ಎಂ ಕುಂಬಾರ ಸಂಯುಕ್ತ ಸಹಕಾರಿಯ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಓಂಕಾರ ಧರಣೆ ಹಾಗೂ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಮಂಡ್ಯ** : ದಿನಾಂಕ 14.03.2025ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಮಾನ್ಯ ನಿರ್ದೇಶಕರುಗಳಾದ ಶ್ರೀಮತಿ ಭಾರತಿ ಜಿ ಭಟ್ ಮತ್ತು ಶ್ರೀಮತಿ ಶೈಲಜಾ ತಪಲಿ ರವರುಗಳು ಮಂಡ್ಯ ಜಿಲ್ಲೆಯ ಮಹಿಳಾ ಸಹಕಾರಿಯಾದ ಶಕ್ತಿ ಮಹಿಳಾ ಸ್ವಸಹಾಯ ಸೌಹಾರ್ದ ಸಹಕಾರಿ ನಿ., ಮಂಡ್ಯ ಇಲ್ಲಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಪ್ರಾಂತೀಯ ಅಧಿಕಾರಿಯಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಬಲರಾಮ ಎನ್ ರವರು ಉಪಸ್ಥಿತರಿದ್ದರು. ಈ ಸಮಯದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರು ಸಹಕಾರಿಯ ನಿರ್ದೇಶಕರಾಗಿದ್ದ ಶ್ರೀಮತಿ ಶಶಿಕಲಾ ಮತ್ತು ಮುಖ್ಯ ಕಾರ್ಯನಿರ್ವಾಹರಾದ ಶ್ರೀ ರವಿಕಿರಣ್ ಇವರಿಗೆ ಮಹಿಳಾ ಸಹಕಾರಿಯ ಕಾರ್ಯಚಟುವಟಿಕೆ ಮತ್ತು ಅಭಿವೃದ್ಧಿಯ ಬಗ್ಗೆ ಮಾಹಿತಿಯನ್ನು ನೀಡಿದರು.

## ಪ್ರವರ್ತಕರ ಸಭೆ ಹಾಗೂ ಭೇಟಿ

**ಕೊಡಗು** : ವಿರಾಜಪೇಟೆ ತಾಲ್ಲೂಕಿನಲ್ಲಿ ನೂತನ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವ ದೃಷ್ಠಿಯಿಂದ ಉದ್ದೇಶಿತ ಹಿಂದೂ ಮಲಯಾಳಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಇದರ ಪ್ರವರ್ತಕರ ಸಭೆಯನ್ನು ಮಾಡಲಾಯಿತು. ಸದರಿ ಸಭೆಯಲ್ಲಿ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಮತ್ತು ಸೌಹಾರ್ದ ಚಳುವಳಿಯ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ 8 ಜನ ಪ್ರವರ್ತಕರು ಭಾಗವಹಿಸಿದ್ದರು.

**ಕೊಡಗು** : ದಿನಾಂಕ 21.03.2025 ರಂದು ಸೋಮವಾರಪೇಟೆ ತಾಲೂಕಿನಲ್ಲಿ ನೂತನ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವ ದೃಷ್ಠಿಯಿಂದ ಉದ್ದೇಶಿತ ಸೋಮವಾರಪೇಟೆ ವೀರಶೈವ ಸೌಹಾರ್ದ ಸಹಕಾರಿ ಸಂಘ ಇದರ ಪ್ರವರ್ತಕರ ಸಭೆಯನ್ನು ಮಾಡಿ, ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮಾಹಿತಿಯನ್ನು ನೀಡಿದರು.

**ಮೈಸೂರು** : ಸರಗೂರು ತಾಲ್ಲೂಕಿನಲ್ಲಿ ನೂತನ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವ ದೃಷ್ಠಿಯಿಂದ ಉದ್ದೇಶಿತ ತೊಗಟ ವೀರ ನೇಕಾರರ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಇದರ ಪ್ರವರ್ತಕರ ಸಭೆಯನ್ನು ಮಾಡಲಾಯಿತು. ಸದರಿ ಸಭೆಯಲ್ಲಿ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಮತ್ತು ಸೌಹಾರ್ದ ಚಳುವಳಿಯ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸುರೇಶ ಆರ್ ಎಸ್ ರವರು ಮಾಹಿತಿಯನ್ನು ನೀಡಿದರು. ಸದರಿ ಸಭೆಯಲ್ಲಿ 13 ಜನ ಪ್ರವರ್ತಕರು ಭಾಗವಹಿಸಿದ್ದರು.

**ಕೊಡಗು** : ದಿನಾಂಕ 21.03.2025ರಂದು ಸೋಮವಾರಪೇಟೆ ತಾಲೂಕಿನಲ್ಲಿ ನೂತನ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವ ದೃಷ್ಠಿಯಿಂದ ಉದ್ದೇಶಿತ ಸೋಮವಾರಪೇಟೆ ವಾಹನ ಚಾಲಕರು ಮತ್ತು ಮೋಟಾರ್ ಕೆಲಸಗಾರರ ಸೌಹಾರ್ದ ಸಹಕಾರಿ ಸಂಘ ಇದರ ಪ್ರವರ್ತಕರ ಸಭೆಯನ್ನು ಮಾಡಿ, ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆಯ ಕುರಿತು ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಮಾಹಿತಿಯನ್ನು ನೀಡಿದ್ದರು.

**ಶಿವಮೊಗ್ಗ** : ದಿನಾಂಕ 14.03.2025ರಂದು ಮಾನ್ಯ ಉಪನಿರ್ದೇಶಕರು,

ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಶಿವಮೊಗ್ಗ, ಇವರ ಅಧ್ಯಕ್ಷತೆಯಲ್ಲಿ ಸಮನ್ವಯ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ನಾಗರಾಜ ಜಿ.ಹೆಚ್ ರವರು ಭಾಗವಹಿಸಿ ಶಿವಮೊಗ್ಗ ಜಿಲ್ಲೆಯ ಸೌಹಾರ್ದ ಸಹಕಾ–ರಿಗಳ ಕುರಿತು ಮಾಹಿತಿ ನೀಡಿದರು.

**ರಾಮನಗರ :** ದಿನಾಂಕ 14.03.2025ರಂದು ಮಾನ್ಯ ಉಪನಿಬಂಧಕರ ಕಛೇರಿ, ರಾಮನಗರ ಇಲ್ಲಿ ಯಶಸ್ವಿನಿ ಯೋಜನೆಗೆ ಸಂಬಂಧಿಸಿದಂತೆ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ರಾಮನಗರ ಜಿಲ್ಲೆಯ ಮಾನ್ಯ ಉಪನಿಬಂಧಕರಾದ ಶ್ರೀಮತಿ ಕವಿತಾ ರವರು ವಹಿಸಿದ್ದರು. ಸಭೆಯ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಭವನ್‌ರಾವ್ ರವರು ನೆರವೇರಿಸಿದರು. ಸದರಿ ಸಭೆಯಲ್ಲಿ ಯಶಸ್ವಿನಿ ಯೋಜನೆಯ ನೋಂದಣಿಗೆ ಸಂಬಂಧಿಸಿದಂತೆ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ತೊಂದರೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು ಹಾಗೂ ಹೆಚ್ಚಿನ ಸೌಹಾರ್ದ ಸಹಕಾರಿಗಳು ಯಶಸ್ವಿನಿ ಯೋಜನೆಯ ಪ್ರಯೋಜನ ಪಡೆದುಕೊಳ್ಳುವಂತೆ ಸೂಚಿಸಿದರು. ಸಭೆಯಲ್ಲಿ 08 ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು :** ದಿನಾಂಕ 19.03.2025ರಂದು ಬೆಂಗಳೂರು ನಗರ (1&4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಯಶಸ್ವಿನಿ ಯೋಜನೆ ಕುರಿತು ಆನ್‌ಲೈನ್ ಮೂಲಕ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯಲ್ಲಿ ಶ್ರೀಮತಿ ಮಾನಸ ಕೃಷ್ಣಪ್ಪ, ಮಾನ್ಯ ಉಪ ನಿಬಂಧಕರು, 1ನೇ ವಲಯ, ಶ್ರೀ ಶಶಿಧರ್ ಪಿ. ಮಾನ್ಯ ಉಪ ನಿಬಂಧಕರು, 4ನೇ ವಲಯ, ಶ್ರೀ ಚಂದ್ರಶೇಖರ್, ಮಾನ್ಯ ಉಪ ನಿಬಂಧಕರು, ಬೆಂಗಳೂರು ಗ್ರಾಮಾಂತರ, ಶ್ರೀ ಶ್ರೀಧರ್ ಎಸ್. ಬೆಂಗಳೂರು ಪ್ರಾಂತೀಯ ಅಧಿಕಾರಿಗಳು, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು ಇವರು ಉಪಸ್ಥಿತರಿದ್ದರು. ಸಭೆಯ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ಇವರು ನೆರವೇರಿಸಿದರು. ಸದರಿ ಸಭೆಯಲ್ಲಿ ಯಶಸ್ವಿನಿ ಯೋಜನೆಯ ನೋಂದಣಿಗೆ ಸಂಬಂಧಿಸಿದಂತೆ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ತೊಂದರೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು ಹಾಗೂ ಹೆಚ್ಚಿನ ಸೌಹಾರ್ದ ಸಹಕಾರಿಗಳು ಯಶಸ್ವಿನಿ ಯೋಜನೆಯ ಪ್ರಯೋಜನ ಪಡೆದುಕೊಳ್ಳುವಂತೆ ಸೂಚಿಸಿದರು. ಸಭೆಯಲ್ಲಿ 48 ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು :** ದಿನಾಂಕ 20.03.2025ರಂದು ಬೆಂಗಳೂರು ನಗರ 2&3ನೇ ವಲಯದ ಸೌಹಾರ್ದ ಸಹಕಾರಿಗಳಿಗಾಗಿ ಯಶಸ್ವಿನಿ ಯೋಜನೆ ಕುರಿತು ಆನ್‌ಲೈನ್ ಮೂಲಕ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯಲ್ಲಿ ಶ್ರೀ ಸಲೀಂ ಬಿ.ಕೆ. ಮಾನ್ಯ ಉಪ ನಿಬಂಧಕರು, 2ನೇ ವಲಯ, ಶ್ರೀ ಹರೀಶ್, ಮಾನ್ಯ ಸಹಾಯಕ ನಿಬಂಧಕರು, 3ನೇ ವಲಯ, ಶ್ರೀ ಶ್ರೀಧರ್ ಎಸ್. ಬೆಂಗಳೂರು ಪ್ರಾಂತೀಯ ಅಧಿಕಾರಿಗಳು, ಕ.ರಾ.ಸೌ.ಸಂ.ಸ.ನಿ, ಬೆಂಗಳೂರು ಇವರು ಉಪಸ್ಥಿತರಿದ್ದರು. ಸಭೆಯ ನಿರೂಪಣೆಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಅನಿಲ್ ಕುಮಾರ್ ಎಮ್. ಇವರು ನೆರವೇರಿಸಿದರು. ಸದರಿ ಸಭೆಯಲ್ಲಿ ಯಶಸ್ವಿನಿ ಯೋಜನೆಯ ನೋಂದಣಿಗೆ ಸಂಬಂಧಿಸಿದಂತೆ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ತೊಂದರೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು ಹಾಗೂ ಹೆಚ್ಚಿನ ಸೌಹಾರ್ದ ಸಹಕಾರಿಗಳು ಯಶಸ್ವಿನಿ ಯೋಜನೆಯ ಪ್ರಯೋಜನ ಪಡೆದುಕೊಳ್ಳುವಂತೆ ಸೂಚಿಸಿದರು. ಸಭೆಯಲ್ಲಿ 48 ಸೌಹಾರ್ದ ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು.

**ಕೊಡಗು :** ದಿನಾಂಕ 21.03.2025 ರಂದು ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರವರು ಸೋಮವಾರಪೇಟೆ ಒಕ್ಕಲಿಗರ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸಹಕಾರಿಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸದರಿ ಸಹಕಾರಿಯ ಆರ್ಥಿಕ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು, ಸಹಕಾರಿಯ ಅಭಿವೃದ್ಧಿಯ ಕುರಿತು ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ, ಉಪಾಧ್ಯಕ್ಷರಿಗೆ, ನಿರ್ದೇಶಕರಿಗೆ ಮುಖ್ಯಕಾರ್ಯನಿರ್ವಾಹಕರಿಗೆ ಮತ್ತು ಸಿಬ್ಬಂದಿಯವರಿಗೆ ಮಾರ್ಗದರ್ಶನ ಮಾಡಿದರು.



## ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾಗಿ ಶ್ರೀ ವೈ. ಕುಮಾರ್

**ಬೆಂಗಳೂರು :** ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ನೂತನ ಅಧ್ಯಕ್ಷರಾಗಿ ಸುರಕ್ಷಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ, ಬೆಂಗಳೂರು ಇದರ ಅಧ್ಯಕ್ಷರಾದ ಶ್ರೀ ವೈ ಕುಮಾರ್ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಮಾರ್ಚ್ 2025 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

### ನಾಲ್ಕು ಪ್ರಾಂತಕ್ಕೆ ಸಂಬಂಧಿಸಿದಂತೆ ಸೌಹಾರ್ದ ಸಹಕಾರಿಯ ಸಮಾಪನೆ ಮತ್ತು ನೊಂದಣಿ ರದ್ದಾಗಿರುವ ಕುರಿತು.

**1. ಬೆಂಗಳೂರು ಪ್ರಾಂತ:**

ಅ. ಶ್ರೀ ಲಕ್ಷ್ಮೀಛಲವಾಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಶಿವಗಂಗೆ, ನೆಲಮಂಗಲ. (ಬಿಜಿಆರ್–0027).

ಆ. ಶ್ರೀ ಸಾಯಿ ರಕ್ಷಾ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ನಂದುಗುಡಿ, ತಾ॥ ಹೊಸಕೋಟೆ (ಬಿಜಿಆರ್–0024)

ಇ. ಶ್ರೀ ಅಮರನಾರಾಯಣಸ್ವಾಮಿ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊಸಕೋಟೆ (ಬಿಜಿಆರ್–0016)

ಈ. ದಿ. ವೈಸ್‌ಮೆನ್ ಸೌಹಾರ್ದ ಪತ್ತಿನ ಸಹಕಾರಿ ನಿ., ದೊಡ್ಡಬಳ್ಳಾಪುರ (ಬಿಜಿಆರ್–0026)

ಉ. ಆಶ್ರಿತ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಹೊಸಕೋಟೆ (ಬಿಜಿಆರ್–0017)

ಮೇಲ್ಕಂಡ ಸೌಹಾರ್ದ ಸಹಕಾರಿಗಳು ಸ್ಥಗಿತಗೊಂಡಿರುವ ಹಿನ್ನಲೆಯಲ್ಲಿ ದಿನಾಂಕ 21.02.2025ರಂದು ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ದೊಡ್ಡಬಳ್ಳಾಪುರ ಇವರು ಶ್ರೀ ಅನಿಲ್ ಕುಮಾರ್ ಎಂ. ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ.

ಊ. ಕವಾಡ ಶ್ರೀ ಕಂಪಳರಂಗಸ್ವಾಮಿ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ಚಿಕ್ಕುಂತಿ , ತಾ॥ ಮೊಳಕಾಲ್ಮೂರು(ಸಿಟಿಜಿ–0031).

ಋ. ಕವಾಡ ಚಿನ್ನಹಗರಿ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ.,ಬೊಮ್ಮಲಿಂಗನಹಳ್ಳಿ, ತಾ॥ ಮೊಳಕಾಲ್ಮೂರು(ಸಿಟಿಜಿ–0019).

ಎ. ಕವಾಡ ಶ್ರೀ ನುಂಕಿಮಲೇ ಸಿದ್ದೇಶ್ವರ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ.,ಮರ್ಲಹಳ್ಳಿ ತಾ॥ ಮೊಳಕಾಲ್ಮೂರು(ಸಿಟಿಜಿ–0033).

ಏ. ಕವಾಡ ಶ್ರೀ ರಾಜವೀರ ಮದಕರಿನಾಯಕ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ., ತುಮಕ್ಲೂರಹಳ್ಳಿ, ತಾ॥ ಮೊಳಕಾಲ್ಮೂರು (ಸಿಟಿಜಿ–0032).

ಐ. ಕವಾಡ ಶ್ರೀ ಭಾರತಾಂಬೆ ವಿವಿದೋದ್ಧೇಶ ಸೌಹಾರ್ದ ಸಹಕಾರಿ ನಿ.,ಯರ್ರೇನಹಳ್ಳಿ, ತಾ॥ ಮೊಳಕಾಲ್ಮೂರು(ಸಿಟಿಜಿ–0023).

ಮೇಲ್ಕಂಡ ಸೌಹಾರ್ದ ಸಹಕಾರಿಗಳು ಸ್ಥಗಿತಗೊಂಡಿರುವ ಹಿನ್ನಲೆಯಲ್ಲಿ ದಿನಾಂಕ 11.03.2025 ರಂದು ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಚಿತ್ರದುರ್ಗ ಇವರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ.

ಒ. ಗ್ರೇಟ್ ಫೋರ್ಟ್ ಅಲ್ಪಸಂಖ್ಯಾತರ ವಿವಿದೊದ್ದೇಶಗಳ ಸೌಹಾರ್ದ ಸಹಕಾರಿ ನಿ.,ಚಿತ್ರದುರ್ಗ(ಸಿಟಿಜಿ–0054)

ಮೇಲ್ಕಂಡ ಸಹಕಾರಿಗೆ ಮಾನ್ಯ ಸಹಕಾರಿಗಳ ಉಪ ನಿಬಂಧಕರು ಚಿತ್ರದುರ್ಗ ಇವರು ದಿನಾಂಕ 28.02.2025 ಇವರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ.

ಓ. ಕವಾಡ ಶ್ರೀ ಸಿರಿಸಮೃದ್ದಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಐನಹಳ್ಳಿ, ತಾ॥ ಮೊಳಕಾಲ್ಮೂರು (ಸಿಟಿಜಿ–0024)

ಸಹಕಾರಿಗೆ ದಿನಾಂಕ 07.03.2025ರಂದು ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು ಚಿತ್ರದುರ್ಗ ಇವರು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ಸಮಾಪನಾಧಿಕಾರಿಯನ್ನಾಗಿ ನೇಮಕ ಮಾಡಿರುತ್ತಾರೆ.

ಔ. ಸಹ್ಯಾದ್ರಿ ಸೌಹಾರ್ದ ಪತ್ತಿನ ಸಹಕಾರಿ ನಿ., ತ್ಯಾಗರಾಜನಗರ, ಚಳ್ಳಕೆರೆ.

ಸಹಕಾರಿಗೆ ಈ ಹಿಂದೆ ನೇಮಕವಾಗಿದ್ದ ಶ್ರೀ ಶಶಿಕುಮಾರ್ ಎಸ್., ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಬೇರೊಂದು ಜಿಲ್ಲೆಗೆ ವರ್ಗಾವಣೆಯಾಗಿರುವುದರಿಂದ ಸದರಿಯವರ ಬದಲಾಗಿ ಸಹಕಾರಿಯ ಸಮಾಪಕರಾಗಿ ಚಿತ್ರದುರ್ಗ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಬೆಂಗಳೂರು ಪ್ರಾಂತೀಯ ಕಛೇರಿ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ದಿನಂಕ 07.03.2025ರಂದು ಮಾರ್ಪಾಡು ಆದೇಶದ ಮೂಲಕ ಮಾನ್ಯ ಸಹಕಾರಿಗಳ ಉಪ ನಿಬಂಧಕರು ಚಿತ್ರದುರ್ಗ ಇವರು ನೇಮಕ ಮಾಡಿರುತ್ತಾರೆ.

**2. ಬೆಳಗಾವಿ ಪ್ರಾಂತ:**

| | Aggregate exposure of a UCB to residential mortgages (housing loans to individuals), other than those eligible to be classified as priority sector | Limited to 25% of total loans and advances |
| | Aggregate exposure of a UCB to real estate sector, excluding housing loans to individuals | 5% of total loans and advances |
| | Housing Loans to individuals (loan amount per dwelling unit, subject to extant single borrower exposure limits) | ₹60 lakh for Tier-1 UCBs<br>₹1.40 crore for Tier-2 UCBs<br>₹2 crore for Tier-3 UCBs<br>₹3 crore for Tier-4 UCBs |
| | Non-Fund Based Facilities like guarantees | • The maturity period for guarantees should be kept short and should not exceed ten years<br>• Total volume of outstanding guarantee obligations should not exceed 10% of the total owned resources of the bank comprising paid up capital, reserves and deposits<br>• Proportion of unsecured guarantees outstanding at any may be limited to 25% of the owned funds of the bank or 25% of the total amount of guarantees, whichever is less<br>• Primarily focus on providing financial guarantees and avoid issuing performance guarantees<br>• Exercise caution when co-accepting bills<br>• Avoid undue concentration of unsecured guarantee commitments to particular groups of customers and/ or trades |
| 3 | Prudential Exposure Limits (Single or Group borrower/ parties) | 15% of Tier-I capital (Single borrower) 25% of Tier-I capital (Group borrower) |
| 4 | Aggregate exposure of a UCB to residential mortgages (housing loans to individuals), other than those eligible to be classified as priority sector | 25% of total loans and advances |
| 5 | Aggregate exposure of a UCB to real estate sector, excluding housing loans to individuals | 5% of total loans and advances |

| | | |
|---|---|---|
| 6 | Tenure of Housing Loans | Housing loans may be repayable within a maximum period of 20 years, including moratorium or repayment holiday |
| 7 | Housing Finance – Loans to individual borrower for repairs/ additions/ alterations | ₹10 lakh in metropolitan centres (those centres with population of 10 lakh and above); and, ₹6 lakh in other centres |
| 8 | Deposit with other banks (Gross) | 20% of its total deposits as on 31st March of PY |
| 9 | Deposit with other banks (Single bank) | 5% of its total depositsas on 31st March of PY |
| 10 | Unsecured loans and advances – bank level | 10% of its total assets (For UCBs having CRAR ≥ 9%, Gross NPAs ≤ 7%; Extra limit upto 15% of total assets for loans sanctioned for productive purposes (upto ₹10,000); For UCBs with a large PSL portfolio (not less than 90%), CRAR ≥ 9%, Gross NPAs ≤ 7; Limit upto 35% of total assets for priority sector loans upto ₹40,000) |
| 11 | Unsecured loans and advances – Individual borrower | Limits ranging from ₹25,000 to ₹5 lakh, depending on the size of Demand and Time Liabilities (DTL) and compliance with CRAR |
| 12 | Lending against shares/debentures (Aggregate limit) | 20% of the Tier-I capital as on March 31st of previous financial year |
| 13 | Lending against shares/ debentures | ₹5 lakh if the security is in physical form<br><br>₹10 lakh if the security is in demat form<br><br>(A margin of 50% should be maintained on all such advances. Advances against units of mutual funds can be extended only to individuals as in the case of advances against the security of shares, debentures and bonds) |
| 14 | Small Value Loans (limit for 50% of aggregate loans and advances)<br><br>(Limit will be 40% by March 31, 2025 and 50% by March 31, 2026) | ₹25 lakh or 0.4% of Tier I capital, whichever is higher, subject to a ceiling of ₹3 crore per borrower.<br><br>Subject to prudential exposure limits (Boards of UCBs, however, shall periodically review the portfolio behaviour and quality under different loan-size categories and where necessary, may consider fixing lower ceilings.) |
| 15 | Gold Loan – Bullet Repayment | 2 lakh (4 lakh for PSL compliant UCBs) Subject to following conditions:<br>(i) UCBs should maintain a LTV ratio of 75% on the outstanding amount of loan including the interest on an ongoing basis, failing which the loan will be treated as Non-Performing Asset (NPA).<br>(ii) The period of the loan shall not exceed 12 months from the date of sanction |

| | | | |
|---|---|---|---|
| 16 | Loans to nominal members (for short / temporary period and for purchase of consumer durables) | 0.50 lakh for UCBs with deposits upto `50 crore<br><br>1 lakh for other UCBs | |
| 17 | Overall PSL targets | 60% of Adjusted Net Bank Credit (ANBC) or Credit Equivalent Amount of Off-balance Sheet Exposure (CEOBSE) from F Y 2024-25 (as per the circular dated 24.03.2025) | |
| 18 | PSL sub-target for weaker section | Higher of 12% of ANBC or CEOBSE by March 31, 2026 | |
| 19 | PSL sub-target for micro enterprises | Higher of 7.5% of ANBC or CEOBSE | |
| 20 | Income Recognition, Asset Classification and Provisioning Norms | | |
| | Special Mention Accounts (SMA) Sub-categories<br><br>Loans other than revolving facilities<br><br>SMA-0<br><br>SMA-1<br><br>SMA-2<br><br>NPA | Basis for classification – Principal or interest payment or any other amount wholly or partly overdue between<br><br><br><br>Up to 30 days<br><br>More than 30 days and up to 60 days<br><br>More than 60 days and up to 90 days<br><br>>90 days | |
| 21 | NPA- Farm Loan: | • In the case of Farm Credit extended to agricultural activities, loan granted for short duration crops will be treated as NPAs, if the instalment of principal or interest thereon remains overdue for two crop seasons.<br><br>• A loan granted for long duration crops will be treated as NPA, if the instalment of principal or interest thereon remains overdue for one crop season | |
| 22 | NPA- For revolving facilities: | • The outstanding balance in the CC/OD account remains continuously in excess of the sanctioned limit/drawing power for 90 days, or<br><br>• The outstanding balance in the CC/OD account is less than the sanctioned limit/drawing power but there are no credits continuously for 90 days, or the outstanding balance in the CC/OD account is less than the sanctioned limit/drawing power but credits are not enough to cover the interest debited during the previous 90 days period inclusive of the day for which the day-end process is being run | |
| | | **Period** | **Provision** |

| | | | |
|---|---|---|---|
| 23 | Assest Classification:<br><br>Sub Standard Assets | An asset which has remained NPA for a period less than or equal to 12 months | 10% of total outstanding |
| | Doubtful I (D1) | An asset which has remained NPA for more than 12 months upto 24 months | 20% of total outstanding |
| | Doubtful II (D2) | An asset which has remained NPA for more than 24 months upto 36 months | 30% of total outstanding |
| | Loss Asset | The entire assets should be written off after obtaining necessary approval from the competent authority and as per the provisions of the Co-operative Societies Act / Rules.<br>If the assets are permitted to remain in the books for any reason, 100 per cent of the outstanding should be provided for. | |
| 24 | Standard Asset Provisioning Rates: | | |
| | Form Credit | 0.25% | |
| | Individual housing loans | 0.40% | |
| | Small and Micro Enterprises | 0.25% | |
| | Commercial Real Estate (CRE) | 1.00% | |
| | CRE- Residential Housing (RH) | 0.75% | |
| | Housing loans at teaser rates | 0.40% | |
| | All others | 0.40% | |
| | | The erstwhile Tier I UCBs, which are currently maintaining standard asset provision of 0.25% on 'all other loans and advances not included above' are permitted to achieve the provisioning requirement of 0.40% on such advances in a staggered manner by March 31, 2025 | |
| 25 | Inter-UCB Deposits | The total inter-UCB deposits accepted by a UCB shall not exceed 10% of its total deposits as on 31st March of the previous financial year subject to specified conditions. | |
| 26 | Capital Adequacy and Provisioning | | |
| | Tier-1 UCBs | Tier-1 Capital - 4.5%<br><br>CRAR - 9% | |
| | Tier-2 to 4 UCBs | Tier-1 Capital - 4.5%<br><br>CRAR - 12% | |

| | | |
|---|---|---|
| 27 | Financially Sound and Well Managed Bank (FSWM) | The Reserve Bank of India (RBI) has established revised criteria for Urban Co-operative Banks (UCBs) to be classified as Financially Sound and Well Managed (FSWM). These criteria, effective from December 1, 2022, include:<br><br>1. Capital Adequacy Ratio (CRAR) at least 1 percentage point above the minimum CRAR applicable to the UCB as on the reference date<br>2. Net NPAs not exceeding 3%<br>3. Net profit for at least three out of the preceding four years, with no net loss in the immediate preceding year<br>4. No default in maintaining Cash Reserve Ratio (CRR) and Statutory Liquidity Ratio (SLR) during the preceding financial year<br>5. Sound internal control system with at least two professional directors on the Board<br>6. Fully implemented Core Banking Solution (CBS)<br>7. No monetary penalty imposed for violation of RBI directives/guidelines during the last two financial years<br>**Self-Assessment Process**<br><br>UCBs are permitted to classify themselves as FSWM based on these criteria. The process involves:<br><br>1. Self-assessment based on the assessed financials and findings of RBI inspection report or audited financial statements (whichever is latest)<br>2. The bank's Board must examine compliance with FSWM criteria and pass necessary resolutions<br>3. The Board resolution must be communicated to the concerned Regional Office of Department of Supervision, RBI immediately, and not later than 15 calendar days from passing the resolution<br>4. Annual review of compliance with FSWM criteria at Board level immediately after the audit of financial statements and RBI inspection report<br>5. The entire process remains subject to supervisory review by RBI |
| 28 | Cash Reserve Ratio (CRR) | 4% of the NDTL |
| 29 | Statutory Liquidity Ratio (SLR) | 18% of the NDTL |
| 30 | Non-SLR Investments | Not to exceed 10% of the bank's total deposits as on 31st March of the previous year |

| | | |
|---|---|---|
| 31 | Unlisted Non-SLR securities | Not to exceed 10% of the total Non-SLR securities as on 31st March of the previous year |
| 32 | Investment Fluctuation Reserve (IFR) | Minimum 5% of the investments held in HFT and AFS categories |
| 33 | Interest rate framework and pricing of deposits for cooperative banks | • Rates offered by REs must remain uniform across all its branches and for all the customers.<br>• REs cannot discriminate between one deposit from another deposit of similar amount, which is accepted on same date at any of its offices.<br>• Interest rates cannot be subject to negotiation between depositors and the REs.<br>• REs shall have to disclose the schedule of interest rates on deposits in advance;<br>• Interest rates on deposits shall be reasonable, consistent, transparent, and available for supervisory review<br>• Interest rates offered by REs on NRE/ NRO deposits cannot be higher than those offered on comparable domestic rupee term deposits |
| 34 | Present Limit on Bulk deposits | |
| | Scheduled UCBs and Tier 3 & 4 UCBs | Rupees One crore and above |
| | Other co-op banks | Fifteen lakh and above |

Source: The Reserve bank of India (RBI) website.

Note: This article is based on the understanding of the writer and the readers may contact RBI for any factual and legal issues.



**ಗಜೇಂದ್ರಗಡ** : ಶ್ರೀ ಜನನಿ ಸೇವಾ ಸೌಹಾರ್ದ ಸಹಕಾರಿ ನಿ., ಗಜೇಂದ್ರಗಡ ಇದರ ನೂತನ ಅಧ್ಯಕ್ಷರಾಗಿ ಶ್ರೀ ಶೇಖರಪ್ಪ  ರಾಜಪ್ಪ ರಾಮಜಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಜಗದೀಶ್ ಪರಸಪ್ಪ ಕಲಗುಡಿಯವರು ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



**ಹಾಸನ** : ದಿನಾಂಕ 08.02.2025 ರಂದು ಸ್ವರ್ಣಭಾರತಿ ವಿವಿದೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ಇದರ ಚುನಾವಣೆ ನಡೆದಿರುತ್ತದೆ ಮತ್ತು ದಿನಾಂಕ 03.03.2025 ರಂದು ಪದಾಧಿಕಾರಿಗಳ ಚುನಾವಣೆಯಲ್ಲಿ ಸಹಕಾರಿಯ ಅಧ್ಯಕ್ಷರಾಗಿ ಬಿ. ಚಾಮರಾಜೇಗೌಡರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಕೆ.ಟಿ. ವೆಂಕಟೇಶಗೌಡ ಇವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

# ನಾನೇ ಶ್ರೇಷ್ಠ ಎನ್ನುವ ಭಾವನೆ

ಶ್ರೀ ಧೀರೇಂದ್ರ ನಾಗರಗಳ್ಳಿ, ಸಮಾಜ ಹಿತ ಹಾಗೂ ವ್ಯಕ್ತಿತ್ವ ವಿಕಸನ ಚಿಂತಕರು

ನಮಗೆಲ್ಲಾ ಕೀಳರಿಮೆ ಪರಿಚಿತ. ಇದಕ್ಕೆ ತದ್ವಿರುದ್ಧವಾದ ನಡವಳಿಕೆ ಇದೆ. ಅದೆ ಮೇಲರಿಮೆ, Superiority complex ! ನಾನೆ ಶ್ರೇಷ್ಠ ನನಗೆ ಎಲ್ಲಾ ಗೊತ್ತು, ಎಲ್ಲವೂ ನನ್ನಿಂದಲೆ ಪ್ರಾರಂಭವಾಗಬೇಕು, ಎಲ್ಲರೂ ನನ್ನನ್ನು ಕೇಳಿಯೆ ಮುಂದೆ ಸಾಗಬೇಕು. ಹೀಗೆ ಯಾವುದೆ ಕೆಲಸ ಕಾರ್ಯದಲ್ಲಿ ತನ್ನ ಶ್ರೇಷ್ಠತೆಯನ್ನು ನೇರವಾಗಿಯೆ ಆಗಲಿ ಅಥವಾ ಪರೋಕ್ಷವಾಗಿ ಸಾಬೀತು ಮಾಡುತ್ತಿದ್ದರೆ ಅದನ್ನು Superiority complex ಎಂದು ಹೇಳಬಹುದು.

ಈ ಮೇಲರಿಮೆ ಎನ್ನುವುದನ್ನು ಮೊಟ್ಟ ಮೊದಲ ಬಾರಿಗೆ ಚಲಾವಣೆಗೆ ತಂದದ್ದು ಆಲ್ಫರ್ಡ ಆಡ್ಲರ್ ಎನ್ನುವ ಆಸ್ಟ್ರೀಯಾ ಮನಶಾಸ್ತ್ರಜ್ಞ, ಈ ವಿಷಯದ ಬಗ್ಗೆ ತಿಳಿದುಕೊಳ್ಳುವ ಮೊದಲು ಈ ಮೇಲರಿಮೆ ಎನ್ನುವುದು ಯಾವ ಕಾರಣಕ್ಕಾಗಿ ಬರುತ್ತದೆ ಎನ್ನುವುದನ್ನು ಸ್ವಲ್ಪ ಗಮನಿಸುವ. ಇಲ್ಲಿ ಮೂಲತಃ ಎರಡು ಕಾರಣಗಳು ದೊರೆಯುತ್ತವೆ. ಮೊದಲನೆಯದು ಮೇಲರಿಮೆ ತೋರಿಸುವ ವ್ಯಕ್ತಿಗೆ ಸಂಬಂಧಿಸಿದ್ದಾದರೆ ಇನ್ನೊಂದು ಮೇಲ–ರಿಮೆಯನ್ನು ಹೀರಿಕೊಂಡ ವ್ಯಕ್ತಿಗೆ ಸಂಬಂಧಿಸಿದ್ದಾಗಿದೆ. ಅಂದರೆ ಮೇಲ–ರಿಮೆ ತೋರುವ ವ್ಯಕ್ತಿಯ ಅಹಂಕಾರ ಮತ್ತು ಅದನ್ನು ಹೀರಿಕೊಳ್ಳುವ ವ್ಯಕ್ತಿಯ ಕಡೆಗೆ ಇರುವ ಒಂದು ದಿವ್ಯ ನಿರ್ಲಕ್ಷ್ಯ! ಇದೆಲ್ಲದಕ್ಕೂ ಮಿಗಿಲಾಗಿ ಆಲ್ಫರ್ಡ್ ಆಡ್ಲರ್ ಪ್ರಕಾರ ಮೇಲರಿಮೆ ನಡವಳಿಕೆಗೆ ಅಂತರ್ಯದಲ್ಲಿ ತುಂಬಿರುವ ಕೀಳರಿಮೆ ಎನ್ನುವುದು ಆಶ್ಚರ್ಯವೆನ್ನಿಸಿದರೂ, ಸತ್ಯ!

ಇನ್ನೊಂದು ಕುತೂಹಲಕಾರಿ ಕಾರಣವೂ ಮೇಲರಿಮೆಗೆ ಇದೆ. ಅದೆನೆಂದರೆ ರಕ್ಷಣಾತ್ಮಕ ನಡೆ. ಹೌದು! ಒಂದು ನಮ್ಮೆಲ್ಲರ ಜೀವನದಲ್ಲಿ ಹಾಸು ಹೊಕ್ಕಾಗಿರುವ ಸಣ್ಣ ಉದಾಹರಣೆ. ಯಾವುದೊ ಒಂದು ವಿಷಯದ ಬಗ್ಗೆ ಮಾತನಾಡುತ್ತಿರುವಾಗ ಅಲ್ಲಿರುವ (ಮೇಲರಿಮೆ ಹೊಂದಿರುವ ವ್ಯಕ್ತಿ) ತನಗೆ ಆ ವಿಷಯದ ಬಗ್ಗೆ ಎಲ್ಲವೂ ತಿಳಿದಿದೆ (ಯಾವ ವಿಷಯವೂ ತಿಳಿಯದೆ ಇದ್ದಾಗ್ಯೂ) ಎಂದು ಹೇಳಿದಾಗ. ಇದೆ ಆ ರಕ್ಷಣಾತ್ಮಕ ನಡೆ! ಅಲ್ಲಿ ನೆರೆದಿರುವ ಜನರು ಹೌದು ಇವರಿಗೆ ಈ ವಿಷಯವು ಚೆನ್ನಾಗಿ ತಿಳಿದಿದೆ ಇವರನ್ನು ಏನು ಕೇಳುವುದು ಬೇಡ ಎಂದು ಅವರನ್ನು ಹೊರತುಪಡಿಸಿ (ಆ ವಿಷಯದ ಬಗ್ಗೆ) ಮಾತನಾಡಲೂ ಪ್ರಾರಂಭಿಸುತ್ತಾರೆ.

**ಈ ಮೇಲರಿಮೆಗೆ ಇನ್ನೊಂದಿಷ್ಟು ಕಾರಣಗಳನ್ನು ಹುಡುಕಿದರೆ:**

- ಸೋಲಿನ ಭಯ
- ಗಮನ ಸೆಳೆಯುವ ಮನಸ್ಥಿತಿ
- ಬೆಳೆದು ಬಂದ ಪರಿಸರ ಮತ್ತು ಬಾಲ್ಯದ ಅನುಭವ
- ಸೋಲಿನ ಭಯ: ಹತ್ತು ಜನರ ಮಧ್ಯದಲ್ಲಿ ಅವರೆಲ್ಲರ ಅಭಿಪ್ರಾಯಕ್ಕೆ ಮಣೆ ಹಾಕಿದರೆ ಎಲ್ಲರ ಮುಂದೆಯೂ ಸೋತಂತೆ. ಆ ಸೋಲಿನ ಅವಮಾನದಿಂದ ತಪ್ಪಿಸಿಕೊಳ್ಳಲು ಹಠಮಾರಿತನವನ್ನು ತೋರಿಸುವುದು.
- ಗಮನ ಸೆಳೆಯುವ ಮನಸ್ಥಿತಿ: ಹತ್ತು ಜನರ ಮಧ್ಯದಲ್ಲಿ ಅವರೆಲ್ಲಾ ಹೇಳುವುದನ್ನು ಬಿಟ್ಟು ಇನ್ನು ಏನನ್ನೋ ಹೊಸದಾಗಿ ಹೇಳಿದಾಗ ಎಲ್ಲರ (ಅದು ಸರಿಯಾದದ್ದೊ ಅಥವಾ ತಪ್ಪೊ ಎನ್ನುವುದು ನಂತರದ ಮಾತು) ಗಮನವು ತಮ್ಮ ಕಡೆ ಹರಿಯುತ್ತದೆ. ಇದರಿಂದ 'EGO' ಸಂತೃಪ್ತವಾಗುತ್ತದೆ.
- ಬೆಳೆದು ಬಂದ ಪರಿಸರ ಮತ್ತು ಬಾಲ್ಯದ ಅನುಭವ: ಮೇಲಿನ ಎಲ್ಲಾ ಕಾರಣಗಳಿಗೂ ಮೂಲ ಕಾರಣವು ಈ ಒಂದು ಕಾರಣವೆ ಆಗಿರಬಹುದು.

ಹೌದು, ಈ ಮೇಲರಿಮೆ ಎನ್ನುವುದನ್ನು ಗುರುತಿಸುವುದು ಹೇಗೆ: ನಮ್ಮ ನಡವಳಿಕೆಯಲ್ಲಿ ಸಹಜತೆಗಿಂತ ಉತ್ಪ್ರೇಕ್ಷೆ ಅಧಿಕವಾದಾಗ, ನಮ್ಮ ನಡವಳಿಕೆಯಲ್ಲಿ ನಮ್ಮ ಬಗ್ಗೆಯೇ ಬಡಾಯಿಕೊಚ್ಚಿಕೊಳ್ಳುವುದು ಕಾಣಿಸಿದಾಗ ಅದು ಮೇಲರಿಮೆಯ ಲಕ್ಷಣವಿರಬಹುದು.

ಇನ್ನೂ ಹೇಗೆ ನಾವು ಮೇಲರಿಮೆಯಿಂದ ಹೊರಬರುವುದು: ನಾವು ಅತಿಯಾಗಿ ಮೇಲರಿಮೆ ಹೊಂದಿದ್ದೇವೆ ಎಂದು ಅರ್ಥವಾದ ಕ್ಷಣ ಅದನ್ನು ಅರಿತು ಅದರಿಂದ ಹೊರಬರುವ ಪ್ರಯತ್ನ ಮಾಡಬೇಕು.

ಬೇರೊಬ್ಬರನ್ನು ನಮ್ಮ ಹುಚ್ಚು–ಹುಚ್ಚಾದ ತರ್ಕಗಳಿಂದ ಅಳೆಯದೆ ಇರುವುದು.

ಎಲ್ಲರಿಗಿಂತ ಕಿರಿಯವ ಎನ್ನುವ ವಿನೀತ ಭಾವನೆಯನ್ನು ಸದಾ ಕಾಲ ಮನಸ್ಸಿಗೆ ತಂದುಕೊಳ್ಳುತ್ತಿರುವುದು.

ನೆನಪಿಡಿ ಒಂದೇ ದಿನದಲ್ಲಿ ಹೊರಬರಲಾಗುವುದಿಲ್ಲ. ಆದರೆ ಒಂದು ದಿನ ಆಗುತ್ತದೆ.

# ಗ್ರಾಹಕರ ಅಂಗಳದಲ್ಲಿ ಸಹಕಾರದ ಬೆಳಕು

– ಶ್ರೀ ರಾಧಾಕೃಷ್ಣ ಕೋಟೆ, ಅಂಚೆ ಕಳಂಜ, ಸುಳ್ಯ ತಾಲೂಕು, ದಕ್ಷಿಣ ಕನ್ನಡ.

ಸಹಕಾರ ಸಂಘ ಅಂದಾಕ್ಷಣ ಸಾಮಾನ್ಯವಾಗಿ ಮುನ್ನೆಲೆಯಲ್ಲಿ ಕಾಣುವುದು ಸಾಲ ಸೌಲಭ್ಯದ ವ್ಯವಸ್ಥೆ. ಆದರೆ ಸಹಕಾರ ಜನರ ಜೀವನದ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸುವ ವಿಪುಲ ಅವಕಾಶವನ್ನು ಹೊಂದಿದೆ.1844ರಲ್ಲಿ ಇಂಗ್ಲೇಂಡಿನ ರಾಕ್ ಡೇಲ್ ಪಟ್ಟಣದಲ್ಲಿ ನೇಕಾರರು ಬಡಗಿಗಳು ದರ್ಜಿಗಳು ಮುಂತಾದ 28ಮಂದಿ ಕುಶಲಕರ್ಮಿಗಳು ರಾಬರ್ಟ್ ಓವೆನ್ ನೇತೃತ್ವದಲ್ಲಿ "ರಾಕ್ ಡೇಲ್ ಇಕ್ವಿಟೇಬಲ್ ಸೊಸಾಣಟಿ–definedn ಆಫ್ ಪಯೋನಿಯರ್ಸ್" ಹುಟ್ಟುಹಾಕಿದ್ದು ಪ್ರಥಮ" ಗ್ರಾಹಕ ಸಹಕಾರಿ ಸಂಘ" ಅನ್ನುವಂತಾದ್ದು ಇತಿಹಾಸ. ಜಗತ್ತಿನ ಈ ಪ್ರಥಮ ಸಹಕಾರಿ ಸಂಘದ ಸ್ಥಾಪನೆಯ ಪ್ರೇರಣೆಯಿಂದ ಸಹಕಾರ ಚಳವಳಿ ಜಗತ್ತಿನಾದ್ಯಂತ ಪಸರಿಸಿ ಬಂಡವಾಳವಾದ ಸಮಾಜವಾದದ ಮಧ್ಯದ ಸುವರ್ಣ ಮಾಧ್ಯಮವಾಗಿ ಜನಸಾಮಾನ್ಯರ ಜೀವನದಲ್ಲಿ ಬೆಳಕುಹರಿಸಿದೆ. 1850ರಲ್ಲಿ ಜರ್ಮನಿಯ ಡಿಲಿಟ್ಸ್ ಪಟ್ಟಣದಲ್ಲಿ ಹರ್ಮನ್ ಶೂಲ್ಸ್ ನೇತೃತ್ವದಲ್ಲಿ ವ್ಯಾಪಾರಿವರ್ಗ ಪಟ್ಟಣ ಸಹಕಾರ ಸಂಘವನ್ನು ಹುಟ್ಟುಹಾಕಿದರು. ದುಡಿಯುವ ವರ್ಗ ಹಾಗೂ ನಗರಪ್ರದೇಶ ಕೇಂದ್ರವಾಗಿ ಆರಂಭವಾದ ಸಹಕಾರ ಚಳವಳಿ ಜಗತ್ತಿನಾದ್ಯಂತ ಕಳೆದ 180 ವರ್ಷಗಳಲ್ಲಿ ವಿವಿಧ ಉದ್ದೇಶಗಳನ್ನು ಇಟ್ಟುಕೊಂಡು ಪಸರಿಸಿ ಜನರ ಜೀವನಾವಶ್ಯಕ ಚಟುವಟಿಕೆಗಳ ಕೇಂದ್ರವಾಗಿದೆ.ಇಂದು ಜಗತ್ತಿನಲ್ಲಿ ಜಪಾನ್ ಗ್ರಾಹಕ ಸಹಕಾರ ಸೇವೆಯಲ್ಲಿ ಮುಂಚೂಣಿಯಲ್ಲಿದ್ದು ಗುಣಮಟ್ಟ ಶಿಸ್ತು ದಕ್ಷತೆಯನ್ನು ಹೊಂದಿರುವ ಕಾರಣ ಗಾತ್ರದಲ್ಲಿ ಸಣ್ಣ ರಾಷ್ಟ್ರವಾದರೂ ವಿಶೇಷ ಸ್ಥಾನಮಾನ ಹೊಂದಿದೆ.

ಕಡಿಮೆ ಲಾಭ ಗ್ರಾಹಕರಿಗೆ ವಿಶೇಷ ಸೇವೆಯೇ ಮುಖ್ಯ ಉದ್ದೇಶವಾಗಿಟ್ಟು ಗ್ರಾಹಕರ ದೈನಂದಿನ ಅವಶ್ಯಕತೆಯ ಸಮಗ್ರ ಸಾಮಾಗ್ರಿಗಳನ್ನು ಪೂರೈಸುವ ಕೇಂದ್ರ ಗ್ರಾಹಕರ ಸಹಕಾರಿ ಸಂಘ. ಗ್ರಾಹಕ ವಸ್ತುಗಳ ಉತ್ಪಾದನೆ, ರೈತರು, ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳ ಖರೀದಿ, ಮಾರಾಟ ಮೂಲಕ ಎಲ್ಲಾ ವ್ಯವಹಾರಗಳನ್ನು ಇಂತಹ ಸಹಕಾರಿ ಸಂಘಗಳಲ್ಲಿ ಕೈಗೊಳ್ಳಲಾಗುತ್ತದೆ. ನಮ್ಮ ದೇಶದಲ್ಲಿ ಕೇಂದ್ರ ಸರಕಾರದ ಅಧೀನದಲ್ಲಿ ರಾಷ್ಟ್ರೀಯ ಗ್ರಾಹಕರ ಸಹಕಾರಿ ಫೆಡರೇಶನ್ (NCCF) ಅಸ್ತಿತ್ವ ದಲ್ಲಿದ್ದು ಕೆಳಗಿನ ಹಂತದ ಎಲ್ಲಾ ಗ್ರಾಹಕ ಸಹಕಾರಿ ಸಂಘಗಳ ಮಾರ್ಗದರ್ಶಕನಾಗಿ ಕಾರ್ಯನಿರ್ವಹಿಸುತ್ತಿದ್ದು ಮಧ್ಯವರ್ತಿ ಗ್ರಾಹಕ ಸಹಕಾರಿ ಸಂಘಗಳು ಈ ಶೃಂಗ ಸಂಸ್ಥೆಯ ಸದಸ್ಯತ್ವ ಹೊಂದಲು ಅವಕಾಶವಿದ್ದು, ಪ್ರಾಥಮಿಕ ಗ್ರಾಹಕ ಸಹಕಾರಿ ಸಂಘಗಳು ಮಧ್ಯವರ್ತಿ ಗ್ರಾಹಕ ಸಹಕಾರಿ ಫೆಡರೇಶನ್ ನ ಸದಸ್ಯತ್ವ ಹೊಂದಿ ತನ್ಮೂಲಕ ಒಂದಕ್ಕೊಂದು ಸಂಬಂಧ ಬೆಳೆಸಿ ಸಹಕಾರಿ ನೀತಿ ಅನುಪಾಲನೆಗೆ ಅವಕಾಶ ಕಲ್ಪಿಸಲಾಗಿದೆ. ದೇಶದಲ್ಲಿ ಅಮುಲ್, ಇಫ್ಕೊ, ಕೇರಳ ದಿನೇಶ ಬೀಡಿ ಕಾರ್ಮಿಕರ ಮಾರಾಟ ಫೆಡರೇಶನ್, ಇಂಡಿಯನ್ ಕಾಫಿ ಹೌಸ್, ಹಾಲು ಉತ್ಪಾದನೆಯ ಕರ್ನಾಟಕದ KMF, ಕೇರಳದ MILMA ಕರ್ನಾಟಕದ ತರಕಾರಿ ಹಣ್ಣು ಹಂಪಲು ಕ್ಷೇತ್ರದ HOPCOMS ಕರ್ನಾಟಕದ ಅಡಿಕೆ ಬೆಳೆಗಾರರ CAMPCO, MAMCOS, TSS ಮುಂತಾದವು, ಬಲಿಷ್ಠ ಸಹಕಾರಿ ಸಂಘಗಳು. ಇವು ಎಲ್ಲವು ರೈತರ ಉತ್ಪಾದನೆಯನ್ನು ಉತ್ತಮ ದರಕ್ಕೆ ಖರೀದಿಸಿ ಸಂಸ್ಕರಣೆ ಮಾಡಿ ಮಾರಾಟ ಮಾಡುವ ಸಹಕಾರ ಸಂಘಗಳಾಗಿದ್ದು ಹಳ್ಳಿ ಅಥವಾ ಪಟ್ಟಣದ ಗ್ರಾಹಕರ ಹಿತಾಸಕ್ತಿಯನ್ನು ಹೊಂದಿದ್ದು ಸರ್ವ ಸದಸ್ಯ ನಿಯಂತ್ರಿತ ಅನ್ನುವಂತಹ ವೈಶಿಷ್ಟತೆಯನ್ನು ಹೊಂದಿದೆ. ದೇಶದಲ್ಲಿ ಇನ್ನೂ ಹಲವಾರು ವಿಶೇಷ ಉದ್ದೇಶದ ಗ್ರಾಹಕ ಸಹಕಾರಿ ಸಂಘಗಳಿದ್ದು, ಪ್ರಾದೇಶಿಕವಾರು ಅವಶ್ಯಕತೆ, ವ್ಯವಹಾರದ ಪ್ರಾಮುಖ್ಯತೆಯನ್ನು ಗಮನಿಸಿ ಕಾರ್ಯನಿರ್ವಹಿಸುತ್ತಿವೆ.

ಅಂತರಾಷ್ಟ್ರೀಯ ಸಹಕಾರಿ ಒಕ್ಕೂಟ ರಚಿಸಿದ ಸಹಕಾರದ ಏಳನೇ ನೀತಿ "ಸಾಮಾಜಿಕ ಕಳಕಳಿ" . ಸಹಕಾರ ಸಂಸ್ಥೆ ಸಾಮಾಜಿಕ ಬದ್ದತೆಯುಳ್ಳ ವ್ಯಾಪಾರೀ ಸಂಸ್ಥೆಯಾಗಬೇಕೇ ಹೊರತು ಕೇವಲ ವ್ಯಾಪಾರಿ ಸಂಸ್ಥೆಯಾದರೆ ಜಾಗತಿಕ ಸಹಕಾರ ನೀತಿಗೆ ವಿರುದ್ದವಾಗಿ, ಸಹಕಾರ ಸಿದ್ದಾಂತದಡಿ ಯಶಸ್ವಿನ ಪಥ ಸಾಗಲು ಅಸಾಧ್ಯ.

1946ರಲ್ಲಿ ಗುಜರಾತಿನ ಖೇಡಾ ಜಿಲ್ಲೆಯ ಆನಂದ್ ನಲ್ಲಿ ಶ್ರೀ ವಲ್ಲಭಭಾಯಿ ಪಟೇಲರ ಮಾರ್ಗದರ್ಶನ, ಶ್ರೀ ಮೊರಾರ್ಜಿ ದೇಸಾಯಿಯವರ ಮುಂದಾಳತ್ವ, ಶ್ರೀ ತ್ರಿಭುವನ ದಾಸ್ ರವರ ನೇತೃತ್ವದಲ್ಲಿ ಆರಂಭ ಗೊಂಡು ಶ್ರೀವರ್ಗೀಸ್ ಕುರಿಯನ್ ಮುನ್ನಡೆಸಿದ ಹಾಲು ಮಾರುಕಟ್ಟೆಯನ್ನು ಉದ್ದೇಶಿಸಿ ಆರಂಭವಾದ ಆನಂದ್ ಮಿಲ್ಕ್ ಯೂನಿಯನ್ ಲಿಮಿಟೆಡ್(ಅಮುಲ್) ಸಹಕಾರಿ ಸಂಸ್ಥೆ ಜಗತ್ತಿನ ಅತ್ಯಂತ ದೊಡ್ಡ ಶ್ವೇತ (ಹಾಲು)ಕ್ರಾಂತಿಯ ಸಹಕಾರಿ ಸಂಘ. ಅದೇ ರೀತಿಯ ದೆಹಲಿ ಕೇಂದ್ರವಾಗಿರುವ ರಸಗೊಬ್ಬರ ಉತ್ಪಾದನೆ ಯ"ಇಫ್ಕೊ" ಬಲಿಷ್ಠ ಸಂಸ್ಥೆ. ಕರಾವಳಿ, ಮಲೆನಾಡಿನ ಪ್ರಮುಖ ವಾಣಿಜ್ಯ ಬೆಳೆಯಾಗಿರುವ ಅಡಿಕೆ ಮಾರುಕಟ್ಟೆ ಖಾಸಗಿಯವರ ಹಿಡಿತದಿಂದಾಗಿ 1970ರ ದಶಕದಲ್ಲಿ ಅಧಃಪತನಗೊಂಡಾಗ ಶ್ರೀ ವಾರಣಾಶಿ ಸುಬ್ರಾಯ ಭಟ್ಟರ ನೇತೃತ್ವದಲ್ಲಿ ಸ್ಥಾಪನೆಯಾದ CAMPCO ಸಂಸ್ಥೆ ಅಡಿಕೆ ಮಾರುಕಟ್ಟೆಗೆ ಸ್ಥಿರ ಹಾಗೂ ಮುನ್ನಡೆಯ ಮಾರುಕಟ್ಟೆ ಒದಗಿಸುವಲ್ಲಿ ಯಶಸ್ವಿಯಾಗಿದೆ. ಬೀಡಿ ಕಾರ್ಮಿಕರ ಹಿತರಕ್ಷಣೆಗಾಗಿ ಕೇರಳದಲ್ಲಿ ಆರಂಭವಾದ ದಿನೇಶ ಬೀಡಿ ಸಹಕಾರಿ ಸಂಘ ಕೇರಳದಾದ್ಯಂತ ಪಸರಿಸಿ, ಬಡ ವರ ಹಿತ ಕಾಪಾಡುವಲ್ಲಿ ಸಹಕಾರಿ ಸಂಸ್ಥೆ ಯಶಸ್ವಿಯಾಗಿರುವುದನ್ನು ಎತ್ತಿ ತೋರಿಸುತ್ತಿದೆ.

1940ರ ಜಗತ್ತಿನ ಎರಡನೇ ಮಹಾಯುದ್ದದ ಕಾಲದಲ್ಲಿ ದೇಶದಲ್ಲಿ ಆಹಾರದ ಕೊರತೆ ಯುಂಟಾದಾಗ ಆಹಾರವನ್ನು ಬಡವರಿಗೆ ವ್ಯವಸ್ಥಿತವಾಗಿ ಹಂಚುದಕ್ಕೋಸ್ಕರ ಗ್ರಾಹಕರ ಸಹಕಾರಿ ಸಂಘಗಳು ಆರಂಭವಾಗಿ ಅವುಗಳ ಮಧ್ಯವರ್ತಿ ಕೇಂದ್ರಗಳಾಗಿ ಜಿಲ್ಲಾ ಸಗಟು ಮಾರಾಟ ಸಹಕಾರಿ ಸಂಘಗಳು

ಕಾರ್ಯಾರಂಭ ಮಾಡಿದವು. ಇಂದು ಕೆಲವು ಸಗಟು ಮಾರಾಟ ಸಹಕಾರ ಸಂಘಗಳು ಜನತಾ ಬಜಾರು ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದು ಸರ್ವ ಸಗಟಿನ ಮಳಿಗೆಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಇದರ ಪ್ರೇರಣೆಯೊ ಎಂಬಂತೆ ಕಳೆದ 30–40 ವರ್ಷಗಳಿಂದ ಖಾಸಗಿ ಮ್ಹಾಲುಗಳು ಸ್ವಯಂ ವಸ್ತುಗಳ ಆಯ್ಕೆಯ ಡಿಪಾರ್ಟ್ ಮೆಂಟಲ್ ಸ್ಟೋರ್ಸ್ ದೇಶದಾದ್ಯಂತ ಭರ್ಜರಿಯಾಗಿ ಕಾರ್ಯನಿರ್ವಹಿಸುತ್ತಿವೆ. ಟೆಲಿಫೋನ್, ವಿದ್ಯುತ್ ಸೇವೆ ಮ್ಯೂಚುವಲ್ ಇನ್ಸೂರೆನ್ಸ್ L P gas ಮುಂತಾದವ ಗ್ರಾಹಕ ವಲಯದಲ್ಲೂ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ದೇಶದಲ್ಲಿ ಹಲವಾರು ಗ್ರಾಹಕರ ಸಹಕಾರಿ ಸಂಘಗಳು ವಿವಿಧ ಉದ್ದೇಶಗಳನ್ನು ಹೊಂದಿ ಯಶಸ್ವಿರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸಹಕಾರಿ ಆಂದೋಲನದ ಪ್ರಾಮುಖ್ಯತೆಗೆ ಸಾಕ್ಷಿ. ಗ್ರಾಹಕ ಸಹಕಾರಿ ಸಂಘಗಳು ಯಶಸ್ವಿಯಾಗಬೇಕಾದರೆ ಅವುಗಳ ಮುಂದೆ ಹಲವು ಸ್ಪರ್ಧಾತ್ಮಕ ಅಂಶಗಳಿದ್ದು, ಸಾಮಾಗ್ರಿಗಳ ಗುಣಮಟ್ಟ ಕಾಪಾಡುವುದು, ಅಗ್ಗದ ದರ, ಗ್ರಾಹಕರನ್ನು ಆಕರ್ಷಿಸುವ ಶಿಬಂಧಿ ಖಾಸಗಿ ವ್ಯಾಪಾರಸ್ತರ ಪೈಪೋಟಿಯನ್ನು ನಿಭಾಯಿಸುವುದು ಪ್ರಮುಖ ಅಂಶಗಳು. ಈ ಎಲ್ಲದರ ಬಗ್ಗೆ ಸದಾ ಎಲ್ಲಾ ಕೋನಗಳಿಂದ ಎಚ್ಚರಿಕೆಯಿಂದ ಗಮನಹರಿಸುವ ಆಡಳಿತ ಮಂಡಳಿ ಇದ್ದಾಗ ಮಾತ್ರ ಸಹಕಾರಿ ಗ್ರಾಹಕ ವ್ಯವಹಾರ ಯಶಸ್ವಿಯಾಗಲು ಸಾಧ್ಯ.

ಕೇಂದ್ರ ಸರಕಾರ ಸಹಕಾರ ಸಿದ್ಧಾಂತದ ಮೂಲಕ ಗ್ರಾಮೀಣ ಜನರ ಸರ್ವಾಂಗೀಣ ಅವಶ್ಯಕತೆಯನ್ನು ಪೂರೈಸಲು ಈಗಾಗಲೇ ಸಿದ್ಧತೆ ನಡೆಸಿದೆ. ಕೇಂದ್ರದಲ್ಲಿ ಸಹಕಾರ ಖಾತೆಗೆ ಬಲನೀಡಿ ಶ್ರೀ ಅಮಿತ್ ಶಾರವರು ಸಹಕಾರ ಖಾತೆಯ ಸಚಿವರಾದ ಬಳಿಕ ಸಾಲ ಠೇವಣಾತಿ ವ್ಯವಹಾರದ ಜತೆಗೆ ಗ್ರಾಹಕನ ಪ್ರತಿಯೊಂದು ಅವಶ್ಯಕತೆಯನ್ನು ಗ್ರಾಮೀಣ ಸಹಕಾರಿ ಸಂಘದಲ್ಲಿ ಒಂದೇ ಸೂರಿನಡಿ ಕಲ್ಪಿಸುವ ಬಗ್ಗೆ ಗಂಭೀರ ಚಿಂತನೆ ನಡೆಸಿದೆ.

**ಇದು ದೇಶದ ಸಹಕಾರ ಚಳವಳಿಯಲ್ಲಿ ಆಗುತ್ತಿರುವ ಇನ್ನೊಂದು ಕ್ರಾಂತಿ.**

ರೈತನ ಉತ್ಪನ್ನದ ಮಾರುಕಟ್ಟೆ ಇರಬಹುದು, ಜೀವನಾಶ್ಯಕ ವಸ್ತುಗಳಿರಬಹುದು, ಎಲ್ಲವು ಗ್ರಾಮಕೇಂದ್ರದ ಏಕ ಸೂರಿನಡಿ ನಡೆಯಬೇಕು. ಜೀನಸು ದೈನಂದಿನ ಜೀವನಾಶ್ಯಕ ವಸ್ತುಗಳು, ಗೃಹೋಪಯೋಗಿ ಸಾಮಾಗ್ರಿಗಳು ಹಾರ್ಡ್ ವೇರ್, ಪ್ಲಾಸ್ಟಿಕ್ ವಸ್ತುಗಳು ಸ್ಟೀಲು, ಅಲ್ಯುಮಿನಿಯಂ ಪಾತ್ರೆಗಳು, ರಸಗೊಬ್ಬರ, ಕ್ರಿಮಿನಾಶಕ, ಸಾವಯವ ಗೊಬ್ಬರ, ವ್ಯವಸಾಯದ ಸಣ್ಣಪುಟ್ಟ ಮೆಶೀನರಿ ಹಾಗೂ ಉಪಕರಣಗಳು, ರಬ್ಬರು ಕೃಷಿಯ ಪರಿಕರಗಳು, ಕೃಷಿ ನೀರಾವರಿ ಪೈಪುಗಳು ಹಾಗೂ ಅವುಗಳ ಬಿಡಿಭಾಗ, ಸರಕಾರಿ ಪಡಿತರ ವಿತರಣೆ, ಇನ್ನಿತರ ಹಲವಾರು ಜನಸಾಮಾನ್ಯರ ಅವಶ್ಯಕ ವಸ್ತುಗಳು, ಔಷಧಿ ಅಂಗಡಿ, ಚಪ್ಪಲಿ ಅಂಗಡಿ, ಜವಳಿ ಮಾರಾಟ, ಬೇಕರಿ ತಿಂಡಿಗಳು ಮುಂತಾದ ಸರ್ವವಸ್ತುಗಳು ಕೃಷಿ ಪತ್ತಿನ ಸಹಕಾರ ಸಂಘಗಳ ಮಳಿಗೆಗಳಲ್ಲಿ ಲಭ್ಯವಿರಬೇಕು. ಆ ಮೂಲಕ ಖಾಸಗಿಯವರ ಸ್ವೇಚ್ಛಾಚಾರಕ್ಕೆ ತಡೆಯೊಡ್ಡಿ ಪೈಪೋಟಿ ನೀಡಿದಾಗ ಸಹಕಾರದ ಮೂಲಕ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ನೀಡಿದಂತಾಗುತ್ತದೆ..ಇದು ಜ್ಯಾರಿಯಾಗಬೇಕಾದರೆ ಸರಕಾರದ ಒತ್ತಡ ಪ್ರಜೆಗಳ ಆಸಕ್ತಿಪ್ರಮುಖವಾಗಿರುತ್ತದೆ.

ಕರ್ನಾಟಕ ಕರಾವಳಿಯ ಸಹಕಾರಿ ಚಳವಳಿ ದಿವಂಗತ ಮೊಳಹಳ್ಳಿ ಶಿವರಾವ್ ರವರ ನೇತೃತ್ವದಲ್ಲಿ ಕಳೆದ ಶತಮಾನದ ಆರಂಭದಲ್ಲಿ ಪ್ರಾರಂಭಗೊಂಡಿದ್ದು ಇಂದು ಕೇಂದ್ರ ಸರಕಾರ ಯೋಜಿಸಿರುವ ಸರ್ವ ವ್ಯವಹಾರದ ಸಹಕಾರ ಮಳಿಗೆಗಳು ಕೃಷಿ ಪತ್ತಿನ ಸಹಕಾರಿ ಸಂಘಗಳ ಮೂಲಕ ಕರ್ನಾಟಕ ಕರಾವಳಿಯಾದ್ಯಂತ ಪಸರಿಸಿದ್ದು, ಇಲ್ಲಿಗೆ ಇದೊಂದು ಹೊಸ ವಿಷಯವಲ್ಲ. ಆದರೂ ಸರ್ವ ವ್ಯವಹಾರ ಸಹಕಾರ ಸಂಘಗಳು ಇನ್ನಷ್ಟು ಬಲಿಷ್ಠವಾಗುವ ಅವಶ್ಯಕತೆಯಿದೆ.

**ಪೂರ್ಣಪ್ರಮಾಣದಲ್ಲಿ ಸಹಕಾರಿ ಸಂಘ ಯಶಸ್ವಿಪಥದಲ್ಲಿ ಸಾಗಬೇಕಾದರೆ ಸಂಘದ ಗ್ರಾಹಕರೊಂದಿಗೆ ಅನ್ಯೋನ್ಯ ಸಂಬಂಧಗಳಿರಬೇಕು.**

* ಒಂದು ಸಹಕಾರ ಸಂಸ್ಥೆ ಮುನ್ನಡೆಯಬೇಕಾದರೆ ಗ್ರಾಹಕ ಸದಸ್ಯ ಪರಮೋಚ್ಚ ನಾಯಕ. ಆತನ ವಿಶ್ವಾಸ ನಂಬಿಕೆಗೆ ಆಡಳಿತ ಮಂಡಳಿ ಶಿಬಂಧಿ ದಕ್ಕೆ ತರಬಾರದು. ಆತನ ವ್ಯವಹಾರವೇ ಸಂಸ್ಥೆಯ ಉನ್ನತಿಯ ಅಡಿಪಾಯವೆಂಬ ಸಿದ್ಧಾಂತ ಬಲವಾಗಿರಬೇಕು.

* ಗ್ರಾಹಕರು ಸಂಸ್ಥೆಗೆ ಭೇಟಿ ನೀಡಿದಾಗ ಶಿಬಂಧಿ ನಗುಮುಖದಿಂದ ಆತನನ್ನು ಸ್ವಾಗತಿಸಬೇಕು.

* ಗ್ರಾಹಕನ ಬೇಡಿಕೆಗನುಸರಿಸಿ ಮಾಲುಗಳನ್ನು ತೋರಿಸುವ ದರ ಮ್ಹಾಲಿನ ಗುಣಮಟ್ಟದ ಬಗ್ಗೆ ಸವಿವರ ಮಾಹಿತಿ ನೀಡುವ ಛಾತಿ ಶಿಬಂಧಿ ಹೊಂದಿರಬೇಕು.

* ಗ್ರಾಹಕನನ್ನು ಹೆಚ್ಚು ಸಮಯ ಕಾಯಿಸದೆ ತ್ವರಿತವಾಗಿ ಸಾಮಾಗ್ರಿಗಳನ್ನು ಪ್ಯಾಕ್ ಮಾಡಿ ಪ್ಲಾಸ್ಟಿಕ್ ಹೊರತಾದ ಕೈಚೀಲಗಳಲ್ಲಿ ನೀಡಬೇಕು. ಒಂದು ವೇಳೆ ಕೈಚೀಲ ಆತನಲ್ಲಿ ಇಲ್ಲದಿದ್ದಲ್ಲಿ ಪೇಪರು ಚೀಲ ಅಥವಾ ಬೇಗ ಮಣ್ಣಿನಲ್ಲಿ ಕರಗುವ ಚೀಲಗಳಲ್ಲಿ ಚಿಲ್ಲರೆ ಸಾಮಾನುಗಳನ್ನು ತುಂಬಿಸಿ ಮುಂದಿನ ದಿನಗಳಲ್ಲಿ ಬಟ್ಟೆ ಕೈಚೀಲಗಳನ್ನು ತರಲು ಹುರಿದುಂಬಿಸಬೇಕು. (ಇದು ಪರೋಕ್ಷವಾಗಿ ಪರಿಸರ ಸಂರಕ್ಷಣೆಯ ವಿಷಯ).

* ಗ್ರಾಹಕನ ಜತೆ ಶಿಬಂಧಿ ಮಾತನಾಡುವಾಗ ನೇರದೃಷ್ಟಿ ಆತನೊಂದಿಗಿದ್ದು ಆತನ ಸ್ವಾಭಿಮಾನಕ್ಕೆ ದಕ್ಕೆಯಾಗುವ ಮಾತುಗಳಾಗಲಿ ನಡತೆ ಯಾಗಲಿ ಇರಬಾರದು. ಆತ ಯಾವುದಾದರೂ ಪ್ರಶ್ನೆಯಿಟ್ಟಾಗ ತಾಳ್ಮೆಯಿಂದ ಕೇಳಿ ನಗುಮೊಗ ಹಾಗೂ ಸಾವಧಾನದಿಂದ ಮಾತನಾಡಿ ಆತನನ್ನು ತೃಪ್ತಿಪಡಿಸಬೇಕು.

* ಹಿಂದೆ ತೆಗೆದುಕೊಂಡು ಹೋದ ಸಾಮಾಗ್ರಿಗಳ ಗುಣಮಟ್ಟದ ಬಗ್ಗೆ ದೂರುನೀಡಿದರೆ ಅದನ್ನು ಸರಿಪಡಿಸುವ ಕುರಿತು ಧನಾತ್ಮಕ ಉತ್ತರವನ್ನು ಚಾಕಚಕ್ಯತೆಯಿಂದ ನೀಡಬೇಕು. ಅದೇ ರೀತಿ ಆತ ವ್ಯಾಪಾರಕ್ಕೆ ಸಂಬಂಧಿಸಿ ಸಲಹೆ ನೀಡಿದಾಗ ಅದನ್ನು ಗಂಭೀರವಾಗಿ ಪರಿಗಣಿಸಿ ಸಂಘ ಹಾಗೂ ಗ್ರಾಹಕರ ಹಿತದೃಷ್ಟಿಯಿಂದ ಅವಶ್ಯಕವೆಂದು ಕಂಡುಬಂದಲ್ಲಿ

ಜ್ಯಾರಿಗೊಳಿಸಲು ಕ್ರಮಕೈಗೊಳ್ಳಬೇಕು.

* ಸಹಶಿಬಂಧಿ ಗ್ರಾಹಕನ ಜತೆ ಋಣಾತ್ಮಕ ರೀತಿಯಲ್ಲಿ ವರ್ತಿಸಿದರೆ ಆತನನ್ನು ಸುಮ್ಮನಿರಿಸಿ ಗ್ರಾಹಕನ ನೋವನ್ನು ಮುಖ್ಯ ಶಿಬಂಧಿ ಶಮನಗೊಳಿಸಿ ಗ್ರಾಹಕ ಸಾವಧಾನಚಿತ್ತದಿಂದ ಸಾಮಾಗ್ರಿಗಳನ್ನು ಕೊಂಡೊಯ್ಯುವ ಚಾಣಾಕ್ಷತನ ವಿಭಾಗ ದ ಮುಖ್ಯಶಿಬಂಧಿಯಲ್ಲಿರಬೇಕು.

* ಒಂದು ವೇಳೆ ಆತ ಬೇಡಿಕೆಯಿಟ್ಟ ಸಾಮಾಗ್ರಿ ಇಲ್ಲವಾದಲ್ಲಿ ಅಥವಾ ಮುಗಿದುಹೋಗಿದ್ದಲ್ಲಿ ತಕ್ಷಣ ತರಿಸಿ ಪೂರೈಸುವ ಭರವಸೆ ನೀಡಬೇಕು. ಅದೇ ರೀತಿ ಭರವಸೆಗೆ ಯಾವುದೇ ಕಾರಣಕ್ಕೂ ತಪ್ಪಬಾರದು.

ಇದೆಲ್ಲಾ ವ್ಯವಹಾರಿಕ ಸೂಕ್ಷ್ಮ ವಿಷಯಗಳಾಗಿದ್ದು ಸದಸ್ಯರ ನಿಕಟ ಸಂಪರ್ಕ ಮಮತೆಗೆ ದಿಶೆಗಳಾಗಿದ್ದು ಸಹಕಾರ ಸಂಘದ ವ್ಯವಹಾರಿಕತೆಗೆ ಹಾಗೂ ಬೆಳವಣಿಗೆಗೆ ಪೂರಕ ವಿಚಾರಗಳು.

ಗ್ರಾಹಕ ಕೇಂದ್ರದ ನಿಭಾವಣೆ ಈ ಕೆಳಗಿನಂತೆ ಇದ್ದಲ್ಲಿ ಪಾರದರ್ಶಕ ವ್ಯವಹಾರ ಪ್ರಜಾಸತ್ತಾತ್ಮಕ ತಳಹದಿಗೆ ಕಾರಣವಾಗಿ ಸಹಕಾರ ಸಂಘ ಬಲಗೊಳ್ಳುವುದು.

ಎಲ್ಲಾ ಸಾಮಾಗ್ರಿಗಳ ಖರೀದಿ ಆಡಳಿತ ಮಂಡಳಿಯಿಂದ ರಚಿಸಲ್ಪಟ್ಟ ಗ್ರಾಹಕ ವ್ಯವಹಾರ ಉಪ ಸಮಿತಿಯ ಮಾರ್ಗದರ್ಶನದಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಯ ಮೇಲ್ವಿಚಾರಣೆಯಲ್ಲಿ ಖರೀದಿ ಹಾಗೂ ಮಾರಾಟ ದ ಹೊಣೆ ವಹಿಸಲ್ಪಟ್ಟ ಮುಖ್ಯಶಿಬಂಧಿ ಉಸ್ತುವಾ–ರಿಯಲ್ಲಿ ನಡೆಯತಕ್ಕದ್ದು.ಕೃಷಿಕರ ಉತ್ಪನ್ನಗಳ ಮಾರಾಟದ ವ್ಯವಸ್ಥೆಗೆ ಪ್ರತ್ಯೇಕ ವಿಭಾಗ ರಚಿಸಲ್ಪಟ್ಟು ಇವು ಎಲ್ಲವು ಮಹಾಸಭೆ ಮಂಜೂರುಗೊಳಿಸಿದ ಗ್ರಾಹಕ ವಿಭಾಗದ ಒಳನಿಯಮಾವಳಿ (subsidery rules )ಗನುಸಾರವಾಗಿ ಕಾರ್ಯಾಚರಣೆಯಲ್ಲಿ ಇರತಕ್ಕದ್ದು.

ಜೀನಸು ದೈನಂದಿನ ಅವಶ್ಯಸಾಮಾಗ್ರಿಗಳ ವಿಭಾಗ ಹಾರ್ಡ್ ವೇರ್ ಪ್ಲಾಸ್ಟಿಕ್ ಸ್ಟೀಲು ಅಲ್ಯುಮಿನಿಯಂ ವಿಭಾಗ ರಸಗೊಬ್ಬರ ಕ್ರಿಮಿನಾಶಕ ನೀರಾವರಿ ಪೈಪ್ ಮೆಶೀನರಿ ವಿಭಾಗ ಪಡಿತರ ವಿಭಾಗ ಈ ರೀತಿ ಬೇರೆಬೇರೆಯಾಗಿ ಸಂಸ್ಥೆಯ ವ್ಯವಹಾರ ಅನುಕೂಲತೆಗನುಸರಿಸಿ ವಿಭಾಗಗಳನ್ನು ವಿಂಗಡಿಸಿ ಪ್ರತಿಯೊಂದಕ್ಕೂ ಶಿಬಂಧಿ ಮುಖ್ಯಸ್ಥರನ್ನು ನಿರ್ಣಯಿಸತಕ್ಕದ್ದು. ಸಣ್ಣಪುಟ್ಟ ತುರ್ತು ಖರೀದಿಗಳಿಗೆ ವಿಭಾಗ ಮುಖ್ಯಸ್ಥರು ಇತರ ಖರೀದಿಗಳನ್ನು ಖರೀದಿ ವಿಭಾಗ ಮುಖ್ಯಸ್ಥ ನಿರ್ವಹಿಸುವುದು ದೊಡ್ಡ ಮಟ್ಟಿನ ಖರೀದಿಗಳನ್ನು ಮುಖ್ಯಕಾರ್ಯನಿರ್ವಹಣಾಧಿಕಾರಿ ಒಪ್ಪಿಗೆಯೊಂದಿಗೆ ಖರೀದಿ ಮುಂತಾದ ವ್ಯವಸ್ಥೆಗಳನ್ನು ಒಳನಿಯಮಾವಳಿಗಳಲ್ಲಿ ಅಳವಡಿಸಿಕೊಳ್ಳತಕ್ಕದ್ದು. ಕನಿಷ್ಟ ಶೇಕಡಾವಾರು ಲಾಭಾಂಶ ನಿಗದಿಪಡಿಸಿ ಗರಿಷ್ಟ ವಹಿವಾಟು ನಡೆಯುವಂತೆ ಗಮನ ಹರಿಸುವುದು ಗ್ರಾಹಕ ವ್ಯವಹಾರದಲ್ಲಿ ಬಹಳ ಪ್ರಮುಖ ಅಂಶ. ಇದರಿಂದ ಗ್ರಾಹಕರಿಗೂ ಅನುಕೂಲ ಅದೇ ರೀತಿ ಸಂಸ್ಥೆ ಕೂಡಾ ಅಧಿಕ ಲಾಭಾಂಶ ಪಡೆಯಲು ಸಾಧ್ಯ. ಹೋಲ್ ಸೇಲ್ ವಿಕ್ರಯ ವಿಭಾಗ ತೆರೆದು ಕನಿಷ್ಟಲಾಭದಲ್ಲಿ ದೂರದ ಊರಿನ ವ್ಯಾಪಾರಸ್ತರು ಇತರ ಸಹಕಾರಿ ಸಂಘಗಳಿಗೆ ಅಥವಾ ದೊಡ್ಡಪ್ರಮಾಣದ ಬಳಕೆದಾರ ಸಂಸ್ಥೆಗಳಿಗೆ ವಿಕ್ರಯಿಸುವ ವ್ಯವಸ್ಥೆಯನ್ನು ನೆರವೇರಿಸಬಹುದು. ಅಂತಹ ಸಂದರ್ಭದಲ್ಲಿ ಹೋಲ್ ಸೇಲ್ ಮಾರಾಟದ ಮುಖ್ಯಸ್ಥ ಶಿಬಂಧಿಯನ್ನು ನೇಮಿಸಿಕೊಂಡು ವ್ಯವಹಾರ ವೃದ್ದಿಸಬಹುದು. ಪ್ರತಿ ವಾರ ಅಥವಾ 2ವಾರಕ್ಕೊಮ್ಮೆ ಗ್ರಾಹಕ ವಿಭಾಗ ಉಪಸಮಿತಿ ಸಭೆ ನಡೆಸಿ ಪ್ರಗತಿ ಪರಿಶೀಲನೆಯನ್ನು ನಡೆಸತಕ್ಕದ್ದು. ಖರೀದಿ ವಿಭಾಗ ಮುಖ್ಯಸ್ಥ ಕಡ್ಡಾಯವಾಗಿ ಸಭೆಗೆ ಆಹ್ವಾನಿತ. ಪ್ರತಿಯೊಂದು ವಿಭಾಗಕ್ಕೂ ವ್ಯಾಪಾರ ವಹಿವಾಟಿನ ಗುರಿ ನಿಗದಿಪಡಿಸಿ ಲೋಪದೋಷಗಳಿದ್ದಲ್ಲಿ ಸರಿಪಡಿಸುವುದು ತಿಂಗಳ ಜಮಾ ಖರ್ಚು ಮಂಡನೆ ಲಾಭ ನಷ್ಟದ ವಿಮರ್ಶೆಮುಂತಾದ ವಿಷಯಗಳು ಉಪಸಮಿತಿ ಸಭೆಗಳಲ್ಲಿ ಚರ್ಚಿಸತಕ್ಕದ್ದು. ಪ್ರತಿ ಆಡಳಿತ ಮಂಡಳಿ ಸಭೆಯಲ್ಲಿ ಹಿಂದಿನ ತಿಂಗಳ ಉಪಸಮಿತಿ ಸಭೆಯ ನಿರ್ಣಯ ಧೃಢೀಕರಣಗೊಳ್ಳತಕ್ಕದ್ದು. ಮಹತ್ವದ ವಿಷಯಗಳಿದ್ದಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಕಾರ್ಯಸೂಚಿಯನ್ನು ಮಂಡಿಸಿ ಅನುಮತಿ ಪಡಕೊಳ್ಳತಕ್ಕದ್ದು. ಅಧ್ಯಕ್ಷರು ಪ್ರತಿ ವಾರದ ವ್ಯವಹಾರಗಳನ್ನು ಕೂಲಂಕುಶ ಪರಿಶೀಲಿಸಿ ಸಲಹೆಗಳಿದ್ದಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಗಮನಕ್ಕೆ ತರತಕ್ಕದ್ದು. ಈ ರೀತಿಯ ಗೋಪುರಾಕೃತಿಯ ವ್ಯವಹಾರ ನಿರ್ಣಯಗಳನ್ನು ಮಾಡಿದಾಗ ಸಹಕಾರದ ಪ್ರಜಾಸತ್ತಾತ್ಮಕ ಆಡಳಿತಕ್ಕೆ ಮನ್ನಣೆ ಬರುತ್ತದೆ. ಲೋಪದೋಷಗಳು ಕುಂಠಿತಗೊಂಡು ಪಾರದರ್ಶಕ ವ್ಯವಹಾರ ಬಲಗೊಳ್ಳುತ್ತದೆ.

ವ್ಯವಹಾರ ಸುಸೂತ್ರವಾಗಿ ನಡೆಯಬೇಕಾದರೆ ಗ್ರಾಹಕ ಬಾಂಧವ್ಯ ಆಡಳಿತ ನಿರ್ವಹಣೆ ಲೆಕ್ಕಪತ್ರ ಕಾನೂನು ನಿಯಮ ಆಡಳಿತ– ಶಿಬಂಧಿ ಬಾಂಧವ್ಯ ಶಿಸ್ತು ಮುಂತಾದ ವಿಷಯಗಳಲ್ಲಿ ನಿರಂತರ ತರಬೇತಿ ಅಗತ್ಯ. ವರ್ಷದಲ್ಲಿ ಕನಿಷ್ಟಎರಡು ಅಥವಾ ಮೂರು ಬಾರಿ ಸಂಪನ್ಮೂಲ ವ್ಯಕ್ತಿಗಳಿಂದ ಒಂದುದಿನದ ತರಬೇತಿ ಹಮ್ಮಿಕೊಂಡು ಪ್ರತಿಯೊಬ್ಬ ಆಡಳಿತ ಮಂಡಳಿ ಸದಸ್ಯ ಶಿಬಂಧಿ ತರಬೇತಿಯಲ್ಲಿ ಪಾಲ್ಗೊಂಡಾಗ ಜ್ಞಾನವೃದ್ದಿಯಾಗಿ ಮಾನವಸಂಪನ್ಮೂಲ ವೃದ್ಧಿಯಾಗುತ್ತದೆ.

ಈ ರೀತಿಯಲ್ಲಿ ವ್ಯವಸ್ಥಿತ ಚೌಕಟ್ಟಿನೊಳಗಡೆ ಗ್ರಾಹಕ ವ್ಯವಹಾರವನ್ನು ಸಹಕಾರ ಸಂಘಗಳಲ್ಲಿ ಅಳವಡಿಸಿದಾಗ ಗ್ರಾಮೀಣ ಜನತೆ ಖಾಸಗಿಯವರ ಕಪಿಮುಷ್ಟಿಗೆ ಸಿಲುಕಿ ತೊಳಲಾಡುವುದು ತಪ್ಪಿಸಬಹುದು. ಸದಸ್ಯಕೇಂದ್ರಿತ ವ್ಯವಹಾರ ಬಲಗೊಂಡು ಜನಸಾಮಾನ್ಯರ ಅನುಕೂಲತೆಗಳು ವೃದ್ಧಿಯಾಗಿ ಗ್ರಾಮೀಣ ಜನರು ಸಂತಸದ ಬದುಕು ಕಾಣಬಹುದು. ಸದಸ್ಯರ ವಹಿವಾಟಿನಿಂದ ಸಂಸ್ಥೆ ಲಾಭಹೊಂದಿದಾಗ ತಮಗೂ ಸಣ್ಣಮಟ್ಟಿನ ಲಾಭ ನಂತರದ ದಿನಗಳಲ್ಲಿ ಸಿಗುವಂತಾದ್ದು ಸಹಕಾರದಲ್ಲಿ ಮಾತ್ರವಲ್ಲದೇ ಬೇರೆಲ್ಲೂ ಕಾಣದು. ಗ್ರಾಹಕ ಸದಸ್ಯರ ಪೂರ್ಣ ವಿಶ್ವಾಸವನ್ನು ಹೊಂದಿ ಆಡಳಿತಮಂಡಳಿ ಶಿಬಂಧಿ ಕಾರ್ಯವೆಸಗುವುದು ಸಹಕಾರ ರಂಗದ ನಿರಂತರ ಅವಶ್ಯಕತೆ.ದೇಶದ ಸಹಕಾರಿ ಗ್ರಾಹಕ ವ್ಯವಹಾರ ವೃದ್ದಿಯಾಗಲು ಸರ್ವಜನತೆಯ ಸಹಕಾರ ಪಾಲುಗಾರಿಕೆ ಅವಶ್ಯ.ಪ್ರತಿ ಗ್ರಾಮದಲ್ಲೂ ಸಹಕಾರದ ಬೆಳಕು ಹರಿದಾಗ ಭಾರತದ ಸರ್ವಾಂಗೀಣ ಪ್ರಗತಿ ಸಾಧ್ಯ.

# ಬಸವನೆಂಬ ಮರೆಯದ ಅರಿವು

– ಶ್ರೀ ಶಿವಕುಮಾರ ಬಿರಾದರ, ತರಬೇತಿ ಅಧಿಕಾರಿ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.



ಭಾರತದ ಭಕ್ತಿ ಪಂಥದ ವೃಕ್ಷದಲ್ಲಿ ಕನ್ನಡ ನಾಡಿನ ರೂಪದಲ್ಲಿ ಹರಡಿಕೊಂಡಿರುವ ಪ್ರಮುಖ ಟಿಸಿಲು ಹನ್ನೆರಡನೇ ಶತಮಾನದಲ್ಲಿ ಬಸವಣ್ಣ ಮುಖೇನ ರೂಪುಗೊಂಡ ಶರಣರ ಭಕ್ತಿ ಚಳವಳಿ. ಬಸವಣ್ಣ ಬರಿಯ ಭಕ್ತನಲ್ಲ; ಆತ ಭಕ್ತಿ ಭಂಡಾರಿ. ಬಸವಣ್ಣನ ಭಕ್ತಿಯ ಸ್ವರೂಪ ಹಾಗೂ ಸಾರ್ಥಕತೆಯ ಕುರಿತು – "ಕಲ್ಯಾಣವೆಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲವನೆರೆದು/ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು/ತೊಳಗಿ ಬೆಳಗುತ್ತಿದ್ದಿತ್ತಯ್ಯಾ ಶಿವನ ಪ್ರಕಾಶ!" ಎನ್ನುವುದು ಅಲ್ಲಮಪ್ರಭುವಿನ ಬಣ್ಣನೆ. ಬಸವಣ್ಣನವರ ಭಕ್ತಿಮಾರ್ಗ ಕೊಟ್ಟು ಕೊಂಬುವ ವಿಧಾನವಲ್ಲ. ತನ್ನ ಆರಾಧ್ಯ ದೈವಂಗೆ ತನ್ನನ್ನು ಒಪ್ಪಿಸಿಕೊಳ್ಳುವ ಮಹಾಮಾರ್ಗವದು. "ದಾಸನಂತೆ ತವನಿಧಿಯ ಬೇಡುವನಲ್ಲ/ಚೋಳನಂತೆ ಹೊನ್ನಮಳೆಯ ಕರೆಸೆಂಬವನಲ್ಲ/ಅಂಜದಿರು ಅಂಜದಿರು ಅವರಂದದವ ನಾನಲ್ಲ" ಎನ್ನುವ ಭಕ್ತಿ ಭಂಡಾರಿ ಕೂಡಲಸಂಗಮದೇವನಲ್ಲಿ ಬೇಡುವುದು ಸದ್ಭಕ್ತಿಯನ್ನು.

ಭಕ್ತಿಯ ಮೂಲಕ ಕೂಡಲಸಂಗಮನನ್ನು ಹೊಂದುವ ಮಾರ್ಗವನ್ನು ಬಸವಣ್ಣ ಬಹು ಸೊಗಸಾಗಿ ಸೂಚಿಸಿದ್ದಾರೆ. "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ/ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ/ ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ" – ಹೀಗೆ ಮನುಷ್ಯ ಧರ್ಮ ಯಾವುದಾಗಿರಬೇಕೆಂದು ಸೂಚಿಸುವ ಬಸವಣ್ಣ, ಇದರ ಫಲವನ್ನು "ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ/ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ" ಎನ್ನುತ್ತಾರೆ. ಡಾಂಭಿಕತೆ ಹಾಗೂ ಭಕ್ತಿಯ ಪ್ರದರ್ಶನವನ್ನು ಲೇವಡಿ ಮಾಡುವ ಬಸವಣ್ಣ, ದೈವ ಸಾಕ್ಷಾತ್ಕಾರಕ್ಕೆ ಅಂತರಂಗಶುದ್ಧಿ ಹಾಗೂ ಬಹಿರಂಗಶುದ್ಧಿಯೇ ಮೂಲ ಎನ್ನುತ್ತಾರೆ. ಬಸವಣ್ಣನ ಭಕ್ತಿಯ ಕೇಂದ್ರದಲ್ಲಿರುವುದು ಮಾನವೀಯತೆ. ಎಲ್ಲರಿಗೂ ಲೇಸೇ ಆಗುವಂತೆ ಬದುಕುವುದೇ ಭಕ್ತಿ–ಪೂಜೆ ಎನ್ನುವ ದರ್ಶನ, ಭಕ್ತಿಯ ಔನ್ನತ್ಯವನ್ನು ಎತ್ತರಕ್ಕೇರಿಸುವಂತಹದ್ದು, ಅದರ ಚೌಕಟ್ಟನ್ನು ವಿಸ್ತರಿಸುವಂತಹದ್ದು, ಮನುಷ್ಯ ಧರ್ಮ ಹಾಗೂ ಭಕ್ತಿಯಲ್ಲಿ ಹೀಗೆ ಅಭೇದವನ್ನು ಕಾಣಿಸಿದವರು ವಿರಳ.

ಭಕ್ತಿಯ ಬಗ್ಗೆ ಭಾವುಕವಾಗಿ ಮಾತನಾಡಿದರೂ ಬಸವಣ್ಣ ಇಹದ ತವಕ–ತಲ್ಲಣಗಳಿಗೆ ಕುರುಡಾದವರಲ್ಲ. ಇಷ್ಟದೈವದ ಆರಾಧನೆಯಲ್ಲಿ ತನ್ನನ್ನು ತಾನು ಮೀರುವುದು. ಲೋಕವನ್ನು ಮರೆಯುವುದು ಭಕ್ತಿಯಲ್ಲಿ ಸಹಜ, ಆದರೆ, ಬಸವಣ್ಣನ ಭಕ್ತಿಯ ಕೇಂದ್ರದಲ್ಲಿರುವುದು ಕಾಯಕಪ್ರಜ್ಞೆ, ಕಾಯಕದಲ್ಲಿ ನಿರತನಾಗಿದ್ದೊಡೆ "ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು" ಎನ್ನುವ ಆಯ್ದಕ್ಕಿ ಮಾರಯ್ಯನ ದರ್ಶನದ ಹಿಂದೆ ಇರುವುದು "ಕಾಯಕವೇ ಕೈಲಾಸ" ಎನ್ನುವ ಬಸವಪ್ರಜ್ಞೆಯೇ. ಭಕ್ತಿಯ ಬಗ್ಗೆ ಬಸವಣ್ಣನವರದು ನಿಷ್ಠುರ ನಿಲುವು. "ಅಲಗಲಗು ಮೋಹಿಸಿದಲ್ಲದೆ ಕಲಿತನವ ಕಾಣಬಾರದು/ನುಡಿದ ನುಡಿ ಜಾರಿದಡೆ ಮನಕ್ಕೆ ಮನ ನಾಚಬೇಕು/ಶಬ್ದಲೊಟ್ಟೆಯತನದಲ್ಲಿ ಎಂತಪ್ಪುದಯ್ಯಾ ಭಕ್ತಿ/ಪಾಪಿಯ ಕೂಸನೆತ್ತಿದಂತೆ/ಕೂಡಲಸಂಗಮದೇವರ ಭಕ್ತಿ/ಅಳಿಮನದವರಿಗೆ ಅಳವಡದಯ್ಯಾ" ಎನ್ನುವ ವಚನ ಬಸವ ಭಕ್ತಿಯ ಸ್ವರೂಪಕ್ಕೆ ಉದಾಹರಣೆಯಂತಿದೆ.

ಭಕ್ತಿಯೊಂದಿಗೆ ತಳಕು ಹಾಕಿಕೊಂಡ ಬಸವಣ್ಣನವರು ಪ್ರತಿಪಾದಿಸಿದ ಕಾಯಕ ಪ್ರಜ್ಞೆ ಜಾತಿಯೊಳಗಿದ್ದೂ ಅದನ್ನು ಮೀರುವ ದಾರಿಯನ್ನು ಕಾಣಿಸಿತು. "ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯಾ/ ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯಾ" ಎನ್ನುವ ಮನೋಧರ್ಮದ ಕಾರಣದಿಂದಲೇ, "ಅನುಭವ ಮಂಟಪ" ಎಲ್ಲ ವರ್ಗದ ಜನರನ್ನು ಶರಣರ ರೂಪದಲ್ಲಿ ಒಳಗೊಂಡಿತು. ಹೀಗೆ ಒಳಗೊಂಡಿದ್ದು ಮಾತ್ರವಲ್ಲ ಅನುಭವ ಅನುಭಾವವಾಗಿ ರೂಪಾಂತರಗೊಳ್ಳಲು ದ್ರವ್ಯ ಒದಗಿಸಿತು. "ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆಂದೆನಿಸಯ್ಯಾ" ಎನ್ನುವ ಬಸವಣ್ಣನವರ ಪ್ರಾರ್ಥನೆ ಶರಣರೆಲ್ಲರ ಸಮೂಹಗಾನವೂ ಹೌದು. ಭಕ್ತಿ ಹಾಗೂ ಕಾಯಕದ ನೆಲೆಗಟ್ಟಿನಲ್ಲಿ ಜಾತಿಯ ಪ್ರಶ್ನೆಯನ್ನು ನಗಣ್ಯವಾಗಿಸಿದ ಕಾರಣದಿಂದಲೇ, ಭಾರತೀಯ ಭಕ್ತಿಪಂಥದ ಚರಿತ್ರೆಯಲ್ಲಿ ಕನ್ನಡದ ಕಲ್ಯಾಣದ ಅಧ್ಯಾಯ ಅಪೂರ್ವದ್ದೆನ್ನಿಸಿದೆ. ಕನ್ನಡ ಕಲ್ಯಾಣದ ಮಾದರಿ ಲೋಕ ಕಲ್ಯಾಣಕ್ಕೂ ದಾರಿಯಾಗಿದೆ.

ಬಸವಣ್ಣನ ಬದುಕು ಹಾಗೂ ಬರವಣಿಗೆ ಎರಡರಲ್ಲೂ "ಭಕ್ತಿ" ಒಂದು ಮೌಲ್ಯದ ರೂಪದಲ್ಲಿ ಪುನರಾವರ್ತನೆಗೊಳ್ಳುತ್ತದೆ. ಇವತ್ತಿನ ಸಂದರ್ಭದಲ್ಲಿ ಭಕ್ತಿ–ಭಕ್ತ ಪದಗಳಿಗೆ ಹೀನಾರ್ಥ ಹಚ್ಚಿದ್ದೇವೆ. ಬಸವ ಮಾರ್ಗದಲ್ಲಿ "ಕಾಲೇ ಕಂಬ, ದೇಹವೇ ದೇಗುಲ, ಶಿರ ಹೊನ್ನ ಕಲಶ" ವಾದರೆ, ಪ್ರಸ್ತುತ ಭಕ್ತಿಯ ಅಭಿವ್ಯಕ್ತಿಗೆ ಚಿನ್ನದ ತೇರು ಬೇಕಾಗುತ್ತದೆ. "ಅರಿವು ಮರವೆಯೊಳಡಗಿ, ಮರವೆ ಅರಿವಿನೊಳಡಗಿ" ಎನ್ನುವಂತಹ ಸಂದರ್ಭ ಇಂದಿನದು. ಈ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 40
Licensed to post without Prepayment License No. PMG BG/WPP-384/2023-2025.

ಮರವೆಗೆ ಮದ್ದು ಬಸವಣ್ಣನೆಂಬ ಅರಿವನ್ನು ಮತ್ತೆ ಮತ್ತೆ ಜೀವಗೊಳಿಸುವುದೇ ಆಗಿದೆ.

### ಮಾತೆಂಬ ಜ್ಯೋತಿರ್ಲಿಂಗ

### "ನುಡಿದಡೆ ಮುತ್ತಿನ ಹಾರದಂತಿರಬೇಕು..."

ಅಣ್ಣನವರ ಈ ಸುಪ್ರಸಿದ್ಧ ವಚನವನ್ನು ಕೇಳದವರಾರು? ಸಿಕ್ಕಸಿಕ್ಕವರೆಲ್ಲ ಉದ್ಧರಿಸುವ ವಚನಗಳಲ್ಲಿ ಇದೊಂದು. ಆದರೆ ಇದರ ಶಕ್ತಿ ನೋಡಿ ಬಳಸಿದವರು ಯಾರೇ ಇರಲಿ, ಯಾವ ಗದ್ದಲದೊಡನೆಯೇ ಬಳಸಿರಲಿ, ಆ ಗದ್ದಲವನ್ನೂ ಮೀರಿ ಪ್ರಜ್ಞೆಯನ್ನು ತಟ್ಟುತ್ತದೆ. ಉಜ್ವಲ ಪ್ರಭೆಯಿಂದ ಕಣೆಳೆಯುತ್ತದೆ– "ಮಾತೆಂಬುದು ಜ್ಯೋತಿರ್ಲಿಂಗ" ಎಂಬ ಹಿರಿಯ–ರಿವಿನಿಂದ ಬಂದ ಕಾಣಿಕೆ ಅದು.

ನುಡಿಯೊಂದು ಹೇಗಿರಬೇಕೆಂಬುದಕ್ಕೆ ಹಲವು ಉಪಮೆಗಳು, ಸೋಪಾನಕ್ರಮದಲ್ಲಿ ಒಂದು ಇನ್ನೊಂದಕ್ಕಿಂತ ಉಜ್ವಲಗೊಳ್ಳುತ್ತಾ ಕೊನೆಗೆ ಅತ್ಯುನ್ನತವಾದ ಪರಿಣಾಮದಲ್ಲಿ ವಿಶ್ರಾಂತವಾಗುತ್ತದೆ. ಒಂದು ವಾಕ್ಯ ಪದ–ಅಕ್ಷರವನ್ನೂ ತೆಗೆದು ಹಾಕುವಂತಿಲ್ಲ ವಚನಗಳ ಸೊಗಸೇ ಹಾಗೆ, ಅದರಲ್ಲೂ ಈ ವಚನವಂತೂ ಸ್ವೋಪಜ್ಞವಾದುದು, ತನ್ನ ಮಾತಿಗೆ ತಾನೇ ಉದಾಹರಣೆಯಾಗಿ ನಿಲ್ಲುವಂಥದು.

ಮೊದಲನೆಯದಾಗಿ ಮುತ್ತು ಅಪರೂಪದ ವಸ್ತು. ಎಲ್ಲೋ ಲಕ್ಷಾಂತರ ಹನಿಗಳಲ್ಲಿ ಒಂದು ಮುತ್ತಾಗುತ್ತದೆ. ಇಂತಹ ಮುತ್ತುಗಳ ಹಾರವೊಂದನ್ನು ಮಾಡಬೇಕಾದರೆ ಒಂದೊಂದೇ ಮುತ್ತನ್ನು ಹೆಕ್ಕಿ ತರಬೇಕು. ಇನ್ನು ಮುತ್ತಿನ ಹಾರವೆಂದರೆ ಕಣ್ಣಿಗೆ ಬರುವುದು ಶುಭ್ರವಾದ ಬಿಳಿಯ ಮುತ್ತೇ. ಈ "ಶುಭ್ರ" ತೆಯೇ ಮಾತಿನ ಮುಖ್ಯಗುಣ. ಅದಕ್ಕೇ ವಾಗ್ದೇವಿಯನ್ನು "ಸರ್ವಶುಕ್ಲಾ" ಎಂದಿದ್ದಾನೆ ಲಾಕ್ಷಣಿಕ ದಂಡಿ: ಮುತ್ತಿನ ಇನ್ನೊಂದು ಲಕ್ಷಣ ದುಂಡು ದುಂಡೆಂದರೆ ದುಂಡೇ, ಒಂದಿನಿತೂ ಓರೆಕೋರೆಗಳಿಲ್ಲ. ಮಾತು ಹೀಗೆ ಸ್ಫಟಿಕವಾಗಿರಬೇಕೆಂಬುದು ಒಂದು. ಮತ್ತೆ. ಇಲ್ಲಿ ಅಣ್ಣನವರು ಹೇಳುತ್ತಿರುವುದು ಮುತ್ತಿನಂತಹ ಮಾತಿನ ಬಗೆಗಲ್ಲ, ಮುತ್ತಿನ ಹಾರದಂತಹ ಮಾತಿನ ಬಗೆಗೆ ಮುತ್ತಿನಂತಹ ಮಾತನ್ನು ಸುಸಂಬದ್ಧವಾಗಿ ಕಟ್ಟುವುದು ಕೌಶಲ್ಯ ಬೇಡುವಂಥದ್ದು.

ಶುಭ್ರತೆ, ಹೊಳಪು, ಸಮಂಜಸತೆ, ಸಂಬದ್ಧತೆ, ಇಷ್ಟಿದ್ದರೆ ಸಾಕೇ? ಅರ್ಥದ ಬೆಳಕಿಲ್ಲದ ಬರೀ ಮಾತು ಎಷ್ಟು ಸುಂದರವಾಗಿದ್ದರೆ ಏನು ಪ್ರಯೋಜನ? ಮಾಣಿಕ್ಯದ ದೀಪ್ತಿಯಂತೆ ಅರ್ಥವನ್ನು ಬೆಳಗಿ ತೋರಿಸಲಾರದಾದರೆ?

ಮಾತು ಬೆಳಗಿ ಅರ್ಥದ ಬೆಳಕು ಹೊಮ್ಮುವುದೇನೋ ಸರಿಯೇ. ಆ ಬೆಳಕಿನಲ್ಲಿ ಕಣ್ಣಿಗೆ ಕಾಣುವುದು ಕಂಡಿತು. ಕಾಣದ್ದು? ಹೊರಗಿನದನ್ನು ಬೆಳಗುವ ಮಾತಿಗೆ ತನ್ನನ್ನು ತಾನೇ ಬೆಳಗಿಸಿಕೊಳ್ಳುವ ತನ್ನ ಒಳಗನ್ನು ತೆರೆದು ತೋರುವ ಶಕ್ತಿಯೂ ಇರಬೇಕಲ್ಲವೇ? ಇಲ್ಲಿ ಅಣ್ಣನವರು ಸ್ಫಟಿಕಶಲಾಕೆಯನ್ನು ಹೇಳುತ್ತಾರೆ. ಸ್ಫಟಿಕವು ಶುಭ್ರತೆಯ, ಪಾರದರ್ಶಕತೆಯ ಸಂಕೇತ. ಆಡಿದ ಮಾತು ಸ್ಫಟಿಕದಂತೆ ನಿಚ್ಚಳವಾಗಿ, ಒಳ ಹೊರ ಅರ್ಥಗಳೆಲ್ಲ ಮನದಟ್ಟಾಗುವಂತಿದ್ದರೆ ಸಾಕೇ? ಅದು ಸ್ಫಟಿಕದ ಶಲಾಕೆಯಾಗಬೇಕು. ಆ ಮೊನೆಯಾದ, ದೃಢವಾದ, ಹಗುರಾದ ಶಲಾಕೆಯನ್ನು ಹಿಡಿದು ತೋರಿದರೆ, ಅದರ ಮೊನೆ ಗಮ್ಯವನ್ನು ಮುಟ್ಟಬೇಕು, ತೋರಿದ ಅರಿವಾಗಬೇಕು, ಅದರ ತೋರುವ ಶಲಾಕೆ ಕಾಣಬಾರದು ಅರ್ಥವುಳಿಯಬೇಕು, ಮಾತು ನಿಲ್ಲಬಾರದು.

ಇವೆಲ್ಲದರ ಅಂತಿಮಗಮ್ಯವಾದರೂ ಏನು? "ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು. ಲಿಂಗವೆಂದರೆ ಕಲ್ಲುಬಂಡೆಯಲ್ಲ ನನ್ನದೇ ಒಳಗಿನ ಒಳಗು ಅದು ಪ್ರಜ್ಞೆಯ, ಅಸ್ತಿತ್ವದ ಒಂದು ಭಾಗವೇ ಆಗಿರದಿದ್ದರೆ ಅದು ಕೇವಲ ಕಲ್ಲು. ಈ ನಿಮ್ಮೊಳಗಿನ ಲಿಂಗ ನಿಮ್ಮ ಮಾತನ್ನು ಮೆಚ್ಚಿ ಅಹುದಹುದೆನಬೇಕು.

ಮಾತೆಂಬುದು ಜ್ಯೋತಿರ್ಲಿಂಗವೆಂಬ ಪ್ರಜ್ಞೆಯಿರುವವನು ಆಡಿ ಅದನ್ನು ಮೈಲಿಗೆ ಮಾಡಲಾರ. ಆಡಲೇಬೇಕೆಂದರೆ, ನುಡಿಯ ಸೂತಕವನ್ನೊಲ್ಲದ ನಿಚ್ಚಟನು ಆ ನುಡಿಗೆ "ನಡೆ"ಯ ಮುಡಿ ಹಾಸುತ್ತಾನೆ. ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವನು ಒಲಿಯನೆಂಬ ಪ್ರಜ್ಞೆ ಅವನಿಗಿದ್ದೇಯಿದೆ. ಈ ಪ್ರಜ್ಞೆಯನ್ನು ಜಗತ್ತಿಗೆ ಉಜ್ವಳಿಸಿ ಕೊಟ್ಟ ಬಸವಣ್ಣನವರ ಜಯಂತಿಯಂದು, ಈ ಭುವನದ ಬೆಳಕಿಗೆ ನಮನ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003